ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 36 ನವೆಂಬರ್ 18, 1979 40 ಪೈಸೆ

ರೈಲ್ವೆ ಕೆಲಸಗಾರರಿಗೆ 'ಬೋನಸ್'

ಬೋನಸ್ ಕೊಡುವ ಶಾಸನ ಜಾರಿಗೆ ಬಂದಾಗಿನಿಂದಲೂ ಈ ಶಾಸನದಂತೆ ರೈಲ್ವೆ, ಅಂಚೆ ಮತ್ತು ತಂತಿ ಇಲಾಖೆ ಮತ್ತು ರಕ್ಷಣಾ ಇಲಾಖೆಗೆ ಸಂಬಂಧಪಟ್ಟ ಕಾರ್ಖಾನೆಗಳ ನೌಕರರಿಗೂ ಬೋನಸ್ ಕೊಡಬೇಕೆಂಬುದಾಗಿ ಸಾರ್ವತ್ರಿಕ ಒತ್ತಾಯವಿತ್ತು. 1974 ರಲ್ಲಿ ನಡೆದ ಚಾರಿತ್ರಿಕ ರೈಲ್ವೆ ಮುಷ್ಕರದಲ್ಲಿ ಬೋನಸ್ ಪ್ರಶ್ನೆಯು ಕೇಂದ್ರ ಬೇಡಿಕೆಯಾಗಿತ್ತು. ಈ ಬೇಡಿಕೆಯನ್ನು ಈಡೇರಿಸುವುದರ ಬದಲು ಆಗ ಪ್ರಧಾನ ಮಂತ್ರಿಯಾಗಿದ್ದ ಇಂದಿರಾಗಾಂಧಿಯವರು ರೈಲ್ವೆ ಕಾರ್ಮಿಕರ ಮೇಲೆ ಅಮಾನುಷ ದಬ್ಬಾಳಿಕೆಯನ್ನು ನಡೆಸಿ ಹೋರಾಟವನ್ನು ದಮನ ಮಾಡಿದರು.

ತುರ್ತುಪರಿಸ್ಥಿತಿ ಹೋದ ನಂತರ 1977ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ರೈಲ್ವೆ ಮತ್ತಿತರ ಕಾರ್ಮಿಕರಿಗೂ ಬೋನಸ್ ಕಾಯ್ದೆಗನುಗುಣವಾಗಿ ಬೋನಸ್ ಕೊಡುವ ಆಶ್ವಾಸನೆಯನ್ನು ಕೊಟ್ಟಿತ್ತು. ಆದರೆ ಅಧಿಕಾರಕ್ಕೆ ಬಂದ ಮೇಲೆ ಅದನ್ನು ಜಾರಿಗೆ ತರಲು ವಿಫಲಗೊಂಡಿತ್ತು.

ಈಗ ಚರಣ್‌ಸಿಂಗ್ ಸರಕಾರ ರೈಲ್ವೆ ನೌಕರರ ವಿವಿಧ ಸಂಘಗಳ ನಾಯಕರ ಜೊತೆಗೆ ದೀರ್ಘಕಾಲದ ಮಾತುಕತೆ ನಡೆಸಿ ರೈಲ್ವೆ ನೌಕರರಿಗೂ ಬೋನಸ್ಸನ್ನು ಕೊಡಲು ಒಪ್ಪಿದೆ. ಈ ಒಪ್ಪಂದದಂತೆ ಈ ವರ್ಷ 15 ದಿವಸದ

ಸಂಪಾದಕೀಯ

ಸಂಬಳವನ್ನು ಕೊಡುವುದೆಂದೂ, ಬರುವ ಸಾಲಿನಿಂದ ರೈಲ್ವೆಯ ಉತ್ಪಾದನೆಯ ಆಧಾರದ ಮೇಲೆ ಬೋನಸ್ ವಿತರಣೆ ಮಾಡುವ ಕ್ರಮವನ್ನು ಜಾರಿಗೆ ತರುವುದೆಂದೂ ಹೇಳಲಾಗಿದೆ.

ಈ ತೀರ್ಮಾನದ ಬಗ್ಗೆ ಮಿಶ್ರ ಪ್ರತಿಕ್ರಿಯೆ ಬಂದಿದೆ. ಅಂಚೆ ಮತ್ತು ತಂತಿ ಇಲಾಖೆ, ರಕ್ಷಣಾ ಇಲಾಖೆಯ ನೌಕರರೂ, ಮತ್ತಿತರರೂ ತಮಗೂ ಬೋನಸ್ ಕೂಡಲೇ ಕೊಡಬೇಕೆಂದು ಒತ್ತಾಯಿಸಿದ್ದಾರೆ. ಅವರ ಬೇಡಿಕೆಯನ್ನು ಈಡೇರಿಸದಿದ್ದರೆ ಮುಷ್ಕರವನ್ನು ಸಹ ಹೂಡಲು ಅವರು ತಯಾರಿ ನಡೆಸುತ್ತಿದ್ದಾರೆ.

ಸರಕಾರದ ಈ ಸೂತ್ರವನ್ನು ಸಿ. ಐ. ಟಿ. ಯು. ನಾಯಕರು ವಿರೋಧಿಸಿದ್ದಾರೆ. ಬೋನಸ್ಸೆಂಬುದು 'ಡಿಫರ್ಡ್ ವೇಜ್' ಎಂಬುದಾಗಿ ಈವರೆಗೆ ಪರಿಗಣಿಸಲ್ಪಟ್ಟಿತ್ತು ಮತ್ತು ಕನಿಷ್ಠ ಬೋನಸ್ಸನ್ನು ಎಲ್ಲ ಕೈಗಾರಿಕಾ ಮತ್ತಿತರ ಸಂಸ್ಥೆಗಳೂ (ಲಾಭವಿರಲಿ ಅಥವಾ ನಷ್ಟವಿರಲಿ) ಕಡ್ಡಾಯವಾಗಿ ಕೊಡಬೇಕೆಂದಿತ್ತು. ಅಧಿಕ ಲಾಭವಿರುವ ಸಂಸ್ಥೆಗಳಲ್ಲಿ ಬೋನಸ್ ಶಾಸನದನ್ವಯ ಅಧಿಕ ಬೋನಸ್ ಕೊಡಬೇಕಿತ್ತು. ಆದರೆ ಈಗ ರೈಲ್ವೆಯವರಿಗೆ ಕೊಡಲು ಸರಕಾರ ಒಪ್ಪಿರುವುದು ಈ ಬೋನಸ್ಸನ್ನಲ್ಲ, ಅವರು ಒಪ್ಪಿದ್ದು ಒಂದು

[ಕಡೆಯ ಪುಟ ನೋಡಿ]

ಚುನಾವಣಾ ಸಿದ್ಧತೆಗೆ ರಾಜ್ಯ ಸಮಿತಿಯ ಕರೆ

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕೋಮುವಾದಿ ಮತ್ತು ಸರ್ವಾಧಿಕಾರಿ ಶಕ್ತಿಗಳನ್ನು ಸೋಲಿಸುವ ದೃಷ್ಟಿಯಿಂದ ಭಾರತ ಕಮ್ಯುನಿಸ್ಟ್ ಪಕ್ಷ, ಶ್ರೀ ದೇವರಾಜ ಅರಸ್‌ರವರ ನೇತೃತ್ವದ ಕಾಂಗ್ರೆಸ್ ಪಕ್ಷ ಮತ್ತು ಇತರ ಸಮಾನ ಅಭಿಪ್ರಾಯವುಳ್ಳ ಪಕ್ಷಗಳೊಂದಿಗೆ ಶೀಘ್ರವೇ ಮಾತುಕತೆ ನಡೆಸಿ, ಒಂದು ಹೊಂದಾಣಿಕೆಗೆ ಬಂದು ಚುನಾವಣಾ ಹೋರಾಟವನ್ನು ಎದುರಿಸಲು ಸಹಾಯವಾಗುವಂತೆ ತೀರ್ಮಾನಕ್ಕೆ ಬರಲು ರಾಜ್ಯಸಮಿತಿಯು ಸೆಕ್ರೆಟಾರಿಯಟ್‌ಗೆ ತಾ. 11-11-79 ರಂದು ಬೆಂಗಳೂರಿನಲ್ಲಿ ಸೇರಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯ ವಿಸ್ತೃತ ಸಭೆಯು ಆದೇಶವನ್ನಿತ್ತಿದೆ.

ಇತರ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡುವುದನ್ನುಗಮನದಲ್ಲಿರಿಸಿಕೊಂಡು ಮಂಗಳೂರು, ಬೆಂಗಳೂರು ದಕ್ಷಿಣ ಮತ್ತು ಗುಲ್ಬರ್ಗ ಕ್ಷೇತ್ರಗಳಿಂದ ಸ್ಪರ್ಧಿಸುವ ಅಭಿಪ್ರಾಯವನ್ನು ರಾಜ್ಯ ಸಮಿತಿಯು ಮಾಡಿದೆ. ಕೋಲಾರ ಸ್ಥಾನವನ್ನು ತನ್ನ ಪಟ್ಟಿಯಿಂದ ರಾಜ್ಯಸಮಿತಿಯು ತೆಗೆದುಹಾಕಿದೆ. ಮಂಗಳೂರು ಲೋಕಸಭಾ ಕ್ಷೇತ್ರದಲ್ಲಿ ಈ ಹಿಂದೆಯೂ ಸ್ಪರ್ಧಿಸಿದ್ದು ಈ ಕ್ಷೇತ್ರದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಪಕ್ಷದ ಒಂದಲ್ಲ ಒಂದು ಸಂಘಟನೆ ಮತ್ತು ಪ್ರಭಾವ ಇರುವುದರಿಂದಲೂ, ಮಂಗಳೂರು ಕ್ಷೇತ್ರದಲ್ಲಿ ಸ್ಪರ್ಧಿಸುವುದಕ್ಕೆ ವಿಸ್ತೃತ ಸಭೆಯು ಅತೀ ಹೆಚ್ಚಿನ ಆದ್ಯತೆಯನ್ನಿತ್ತಿದೆ. ಈ ದೃಷ್ಟಿಯಿಂದ ಮತ್ತು ರಾಜ್ಯದಾದ್ಯಂತ ಸರ್ವಾಧಿಕಾರಿ ಮತ್ತು ಕೋಮುಶಕ್ತಿಗಳನ್ನು ಸೋಲಿಸಲು ಸಾಧ್ಯವಾಗುವಂತೆ ದೊಡ್ಡ ರೀತಿಯಲ್ಲಿ ಚುನಾವಣಾ ತಯಾರಿ ನಡೆಸಲು ಪಕ್ಷದ ಎಲ್ಲಾ ಘಟಕಗಳಿಗೂ ಕರೆ ಈಯಲಾಗಿದೆ. ಪಕ್ಷದ ಚುನಾವಣಾ ನಿಧಿಗೆ ಉದಾರ ಧನ ಸಹಾಯ ಮತ್ತು ಚುನಾವಣಾ ಕೆಲಸದಲ್ಲಿ ಎಲ್ಲಾ ರೀತಿಯ ಸಹಕಾರ ಕೊಡುವಂತೆಯೂ, ಪಕ್ಷದ ಸದಸ್ಯರುಗಳ, ಹಿತೈಷಿಗಳ, ಗೆಳೆಯರ ಮತ್ತು ಸಾಮೂಹಿಕ ಸಂಘಟನೆಗಳನ್ನು ರಾಜ್ಯಸಮಿತಿಯು ವಿನಂತಿಸಿಕೊಳ್ಳುತ್ತದೆ. ಅತೀ ಹೆಚ್ಚಿನ ತ್ಯಾಗ ಮತ್ತು ಉತ್ಸಾಹಗಳಿಂದ ಶ್ರಮಿಸಲು ರಾಜ್ಯಸಮಿತಿಯು ಕರೆಯೀಯುತ್ತದೆ.

●

ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಶಕ್ತಿಗಳನ್ನು ಬೆಳೆಸಲು ಐಕ್ಯ ಹೋರಾಟಕ್ಕೆ ಕರೆ

"ಒಂದೆಡೆ ಇಂದಿರಾಗಾಂಧಿ ಸರ್ವಾಧಿಕಾರ ಶಕ್ತಿ ಮತ್ತು ಇನ್ನೊಂದೆಡೆ ಆರ್. ಎಸ್. ಎಸ್.-ಜನಸಂಘ ನಿಯಂತ್ರಿತ ಕೋಮುವಾದಿ ಜನತಾ ಪಕ್ಷಗಳು ಎಂತಾದರೂ ಅಧಿಕಾರವನ್ನು ಕಬಳಿಸಬೇಕೆಂದಿರುವಾಗ, ಕೋಮುವಾದ ಮತ್ತು ಸರ್ವಾಧಿಕಾರಕ್ಕೆ ವಿರೋಧವಿರುವ ಎಲ್ಲಾ ಶಕ್ತಿಗಳು ಒಂದಾಗಿ ಹೋರಾಡುವ ಚಾರಿತ್ರಿಕ ಆವಶ್ಯಕತೆ ಇದೆ" ಎಂಬುದು ಬೆಂಗಳೂರು ನಗರದಲ್ಲಿ ನವೆಂಬರ್ 10ರಂದು ಸೇರಿದ ಸಮಾವೇಶದ ಒಮ್ಮತದ ಅಭಿಪ್ರಾಯವಾಗಿತ್ತು. ಈ ಶಕ್ತಿಗಳನ್ನು ರಾಜಕೀಯವಾಗಿ ಜನರಿಂದ ಪ್ರತ್ಯೇಕಿಸಿ, ಮುಂದಿನ ಚುನಾವಣೆಯಲ್ಲಿ ಸೋಲಿಸುವುದಕ್ಕಾಗಿ ಎಲ್ಲಾ ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಶಕ್ತಿಗಳು ಒಂದಾಗಿ ಶ್ರಮಿಸಬೇಕೆಂದೂ ಸಮಾವೇಶವು ಕರೆ ಇತ್ತಿತು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷ, ಶ್ರೀ ದೇವರಾಜ ಅರಸ್ ಅವರ ನೇತೃತ್ವದ ಕಾಂಗ್ರೆಸ್ ಪಕ್ಷ, ರಿಪಬ್ಲಿಕನ್ ಪಕ್ಷ (ಗವಾಯಿ ಗುಂಪು), ಅಖಿಲ ಭಾರತ ಮುಸ್ಲಿಮ್‌ಲೀಗ್ ಮತ್ತು ಇಂಡಿಯನ್ ನೇಷನಲ್ ಮುಸ್ಲಿಮ್‌ಲೀಗ್ ಪಕ್ಷಗಳ ಪ್ರತಿನಿಧಿಗಳಿಂದ ನಗರದ ಸುಭಾಷ್ ನಗರದ ಮೈದಾನದಲ್ಲಿ ಸೇರಿದ್ದ ರಾಜ್ಯಮಟ್ಟದ ಸರ್ವಾಧಿಕಾರ ಮತ್ತು ಕೋಮುವಾದ ವಿರೋಧ ಸಮಾವೇಶವನ್ನು ರಾಜ್ಯದ ಕೃಷಿ ಮಂತ್ರಿ ಶ್ರೀಮಾನ್ ಕೆ. ಎಚ್. ರಂಗನಾಥನವರು ಉದ್ಘಾಟಿಸಿದರು. ಕೇವಲ ಸಮಾವೇಶದಷ್ಟಕ್ಕೆ ಈ ಹೋರಾಟವನ್ನು ಸೀಮಿತಗೊಳಿಸದೆ, ಎಲ್ಲಾ ಮಟ್ಟದಲ್ಲೂ, ಮನೆಮನೆಗೂ ಈ ಸಂದೇಶವನ್ನೊಯ್ಯಲು ರಂಗನಾಥನವರು ಕರೆ ಇತ್ತರು. ಉದ್ಘಾಟನಾ ಕಾರ್ಯಕ್ರಮಕ್ಕೆ ಮೊದಲು ಸ್ವಾಗತ ಭಾಷಣ ಮಾಡಿ ಕಾಂ. ಎಂ. ಎಸ್. ಕೃಷ್ಣನ್ ಅವರು ಸಮಾವೇಶದ ಉದ್ದೇಶವನ್ನು ವಿವರಿಸಿದರು. ಶ್ರೀ ಸಿದ್ಧರಾಮರೆಡ್ಡಿ, ಕಾಂ. ಎನ್. ಎಲ್. ಉಪಾಧ್ಯಾಯ, ಕಾಂ. ರಾಮನ್ ಮತ್ತಿನ್ನಿಬ್ಬರಿಂದ ಸೇರಿದ ಐದು ಸದಸ್ಯರ ಅಧ್ಯಕ್ಷ ಮಂಡಳಿ ಸಭೆಯನ್ನು ನಡೆಸಿಕೊಟ್ಟಿತು. ಮೊದಲ ಮಾತುಗಳನ್ನಾಡಿದ ಸಿದ್ಧರಾಮ ರೆಡ್ಡಿ ಅವರು ನಮ್ಮ ಮುಂದಿರುವ ಅಪಾಯಗಳನ್ನು ಎದುರಿಸಲು ಒಂದಾಗಿ ಹೋರಾಡಲು ಕರೆ ಇತ್ತರು.

ಸರ್ವಾಧಿಕಾರ ಮತ್ತು ಕೋಮುವಾದಗಳ ವಿರುದ್ಧ ನಡೆಸುವ ಹೋರಾಟವು ಆರ್ಥಿಕ-ಸಾಮಾಜಿಕವಾಗಿಯೂ, ಸೈದ್ಧಾಂತಿಕವಾಗಿಯೂ ಮತ್ತು ರಾಜಕೀಯವಾಗಿಯೂ ನಡೆದರೇನೇ ಯಶಸ್ಸು ಸಾಧ್ಯ. ಆರ್ಥಿಕ-ಸಾಮಾಜಿಕ ಸಮಾನತೆಗಾಗಿ ಜನತೆಯು ನಡೆಸುವ ಹೋರಾಟಕ್ಕೆ ಬೆಂಬಲವಿತ್ತರೆ ಮಾತ್ರ ಸರ್ವಾಧಿಕಾರದ ವಿರುದ್ಧದ ಹೋರಾಟವು ಅರ್ಥಪೂರ್ಣವಾಗುವುದೆಂದೂ, ಈ ದಿಸೆಯಲ್ಲಿ ನೆರೆದ ಪ್ರತಿನಿಧಿಗಳೆಲ್ಲರೂ ಯೋಚಿಸಿ ಶ್ರಮಿಸಬೇಕೆಂದೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯ ಕಾರ್ಯದರ್ಶಿ ಕಾಂ.ಎಂ.ಕೆ. ಭಟ್ ಹೇಳಿದರು. ಕಾಂ. ಎಂ.ಎಸ್. ಕೃಷ್ಣನ್ ಮಂಡಿಸಿದ ನಿರ್ಣಯದ ಮೇಲೆ ಮಾತನಾಡುತ್ತಾ ಈಗ ಮತ್ತೆ ಇಂದಿರಾ-ಸಂಜಯ ದುಷ್ಟ ಕೂಟದಿಂದ ಮತ್ತು ಕೋಮುವಾದಿ ಶಕ್ತಿಗಳಿಂದ ರಾಷ್ಟ್ರವನ್ನು ರಕ್ಷಿಸಲು ಒಂದಾಗಿ ಹೋರಾಡಲು ಕರೆ ಈಯುವ ನಿರ್ಣಯಕ್ಕೆ ಬೆಂಬಲ ಸೂಚಿಸಿದರು. ಸಿ. ಐ. ಟಿ. ಯು. ರಾಜ್ಯಸಮಿತಿಯ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಪ್ರಾಂತ ರೈತಸಂಘದ ಅಧ್ಯಕ್ಷ ಕಾಂ. ಎಚ್. ಮುಗುವಾಳಪ್ಪ, ವಿದ್ಯಾರ್ಥಿ ಫೆಡರೇಷನ್ ರಾಜ್ಯಸಮಿತಿ ಅಧ್ಯಕ್ಷ ಕಾಂ. ಇಕ್‌ಬಾಲ್ ಹುಸೇನ್, ಎ. ಐ. ಟಿ.ಯು.ಸಿ. ಮುಖಂಡ ಕಾಂ. ಬಾಲಕೃಷ್ಣನ್, ಅಖಿಲ ಭಾರತ ಮುಸ್ಲಿಂ ಲೀಗ್‌ನ ಮುಖಂಡ ಶ್ರೀ ಅಬ್ದುಲ್ ಅಜೀಜ್ ಮೆಮನ್, ರಿಪಬ್ಲಿಕನ್ ಪಕ್ಷದ ಶ್ರೀ ರಾಮದಾಸ್, ಇಂಡಿಯನ್

[ಕಡೆಯ ಪುಟ ನೋಡಿ]

ಮಂಗಳೂರಿನಲ್ಲಿ ಮತಪ್ರದರ್ಶನಕ್ಕೆ ಕುಂದಾಪುರದಲ್ಲಿ ಭರದಿಂದ ಸಿದ್ಧತೆ

ತಾರೀಖು 11-11-1979 ರಂದು ದ. ಕ. ಜಿಲ್ಲಾ ಕುಂದಾಪುರ ತಾಲ್ಲೂಕು ರೈತಸಂಘದ ವಿಸ್ತೃತ ಸಭೆಯು ಕಾಂ. ಸಿ. ನಾರಾಯಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ತಾಲ್ಲೂಕು ರೈತಸಂಘದ ಕಾರ್ಯದರ್ಶಿಯವರಾದ ಕಾಂ. ಕೆ. ಶಂಕರ್‌ನವರು ರೈತಸಂಘದ ಚಟುವಟಿಕೆಯ ವರದಿಯನ್ನಿಡುತ್ತಾ, ಗ್ರಾಮಾಂತರ ಪ್ರದೇಶದ ರೈತ-ಕೃಷಿ ಕೂಲಿಗಾರರ ಸಮಸ್ಯೆ ಹಾಗೂ ಬೆಳೆದು ಬರುತ್ತಿರುವ ಕೃಷಿಕೂಲಿಗಾರರ ಮತ್ತು ರೈತರ ಚಳುವಳಿಯ ಬಗ್ಗೆ ವಿವರಿಸಿದರು.

ತಾರೀಖು 21-11-1979ರಂದು ಜಿಲ್ಲಾ ಕೇಂದ್ರವಾದ ಮಂಗಳೂರಿನಲ್ಲಿ ರೈತ-ಕೃಷಿಕೂಲಿಗಾರರ ಮತ್ತು ಕಾರ್ಮಿಕರ ಮುಖ್ಯ ಬೇಡಿಕೆಗಳನ್ನು ಒತ್ತಾಯಿಸಿ, ಜಿಲ್ಲಾಧಿಕಾರಿಯವರ ಕಛೇರಿಯ ಎದುರುಗಡೆ ನಡೆಯುವ ಬೃಹತ್ ಮತಪ್ರದರ್ಶನವನ್ನು ಯಶಸ್ವಿಗೊಳಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. ಕುಂದಾಪುರದಿಂದ ತಾರೀಖು 17-11-1979 ರಂದು ರೈತ-ಕೃಷಿ ಕೂಲಿಗಾರರು ಮತ್ತು ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಮಂಗಳೂರಿಗೆ "ಕಾಲ್ನಡೆ ಜಾಥಾ" ಹೊರಡಲು ತೀರ್ಮಾನ ಕೈಗೊಂಡು, ದಾರಿಉದ್ದಕ್ಕೂ ಪ್ರಚಾರ ಹಾಗೂ ಅಲ್ಲಲ್ಲಿ ಸಾರ್ವಜನಿಕ ಸಭೆಗಳನ್ನು ಏರ್ಪಡಿಸಲು ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಯಿತು.

ಭೂಸುಧಾರಣಾ ಕಾಯಿದೆಯಲ್ಲಿ ಜರೂರು ತಿದ್ದುಪಡಿಯಾಗಬೇಕು, ರೈತರಿಗೆ ಪರಿಹಾರವಿಲ್ಲದೇ ಭೂಮಿಯ ಒಡೆತನ ಲಭಿಸಬೇಕು, ರೈತರ ಮೇಲಿನ ಎಲ್ಲಾ ಸಾಲಗಳನ್ನು ರದ್ದು ಮಾಡಬೇಕು, ಕೃಷಿಕೂಲಿಗಾರರಿಗೆ ಕನಿಷ್ಠ ಕೂಲಿ ರೂ. 10 ನ್ನು ನಿರ್ಣಯಿಸಿ, ಜಾರಿಗೊಳಿಸಬೇಕು, ಕಡಿಮೆ ಬಡ್ಡಿಯ ದೀರ್ಘ ಕಂತಿನಲ್ಲಿ ಸಾಲಗಳನ್ನು ರೈತರಿಗೆ ಒದಗಿಸುವ ಏರ್ಪಾಡು ಮಾಡಬೇಕು, ಭೂನ್ಯಾಯ ಮಂಡಳಿಗಳಲ್ಲಿ ರೈತಸಂಘದ ಪ್ರತಿನಿಧಿಗಳಿಗೂ ಪ್ರಾತಿನಿಧ್ಯ ನೀಡಬೇಕು–ಇವೇ ಮೊದಲಾದ ಬೇಡಿಕೆಗಳಾಗಿದ್ದು, ಈ ಬಗ್ಗೆ ರೈತರ, ಕೃಷಿಕೂಲಿಗಾರರ ಮಧ್ಯೆ ಪ್ರಚಾರ ನಡೆಸಲು ತಾಲ್ಲೂಕಿನ ಮುಖ್ಯ ಪ್ರದೇಶಗಳಲ್ಲಿ ಸಾರ್ವಜನಿಕ ಸಭೆಗಳನ್ನು ನಡೆಸಲು ಸಭೆಯಲ್ಲಿ ನಿರ್ಧರಿಸಲಾಯಿತು.

●

ಮೈಕೋ ಹೋರಾಟಕ್ಕೆ ಮಾರ್ಕ್ಸಿಸ್ಟ್ ಪಕ್ಷದ ಬೆಂಬಲ

ಅಕ್ಟೋಬರ್ 5 ರಿಂದ ಬೆಂಗಳೂರು ನಗರದಲ್ಲಿ ನಡೆಯುತ್ತಿರುವ ಬಹುರಾಷ್ಟ್ರೀಯ ಕಂಪನಿ ಮೈಕೋದ ಕಾರ್ಮಿಕರ ಹೋರಾಟಕ್ಕೆ ತಾ. 11-11-1979 ರಂದು ಸೇರಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯ ವಿಸ್ತೃತ ಸಭೆಯು ತನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ. ಮೈಕೋ ಮಾಲಕರು ಕಾರ್ಮಿಕ ಸಂಘದ ಮುಖಂಡರುಗಳ ಮೇಲೆ ನಡೆಸುತ್ತಿರುವ ಹಲ್ಲೆಯನ್ನು ಖಂಡಿಸಿದ ಸಭೆಯು, ಕೂಡಲೇ ಮಧ್ಯ ಪ್ರವೇಶ ಮಾಡಿ ಸಮಸ್ಯೆಯನ್ನು ಪರಿಹರಿಸುವಂತೆ ಸರಕಾರವನ್ನು ಒತ್ತಾಯಿಸಿದೆ. ಮೈಕೋ ಕಾರ್ಮಿಕರ ಹೋರಾಟವೆಂದರೆ ಎಲ್ಲಾ ಕಾರ್ಮಿಕರ ಹೋರಾಟ ಎಂದು ತಿಳಿದು, ರಾಜ್ಯದಾದ್ಯಂತ ಬೆಂಬಲವೀಯಲೂ ಸಭೆಯು ಕರೆ ಇತ್ತಿದೆ.

●

ಮಂಗಳೂರಲ್ಲಿ ಬೃಹತ್ ಮತಪ್ರದರ್ಶನಕ್ಕೆ ಸಿದ್ಧತೆ

ಪ್ರಾವಿಡೆಂಟ್ ಹಣವನ್ನು ಕಾರ್ಮಿಕರಿಗೆ ಪಾವತಿ ಮಾಡುವಾಗ ವಿನಾ ಕಾರಣ ಆಗುವ ವಿಳಂಬ, ಇ.ಎಸ್.ಐ. ಸ್ಕೀಮ್‌ನಲ್ಲಿ ಮಜೂರರಿಗೆ ಆಗುವ ಅನ್ಯಾಯ, ಸರಕಾರವು ಕನಿಷ್ಠ ಮಜೂರಿಯನ್ನು ನಿಗದಿ ಮಾಡುವಾಗ ಆಗುವ ಹೆಚ್ಚು ಕಡಿಮೆ ಹಾಗೂ ಕೆಲವು ಕೈಗಾರಿಕೆಗೆ ಇನ್ನೂ ನಿಗದಿ ಮಾಡದೆ ಇರುವುದು, ದಿನನಿತ್ಯ ಅವಶ್ಯ ಸಾಮಗ್ರಿಗಳ ಬೆಲೆ ಏರಿಕೆಯಿಂದ ಕಾರ್ಮಿಕರಿಗೆ ಆಗುವ ಕಷ್ಟ ಇವೇ ಮೊದಲಾದ ಕಾರ್ಮಿಕರನ್ನು ಬಾಧಿಸುವ ಸಮಸ್ಯೆಗಳನ್ನು ಸರಕಾರದ ಗಮನಕ್ಕೆ ತರಲು ತಾರೀಕು 21-11-1979 ದ. ಕ. ಜಿಲ್ಲೆಯ ಸಿ.ಐ.ಟಿ.ಯು. ನೇತೃತ್ವದಲ್ಲಿ ಬೇಡಿಕೆ ದಿನಾಚರಣೆಯನ್ನು ಆಚರಿಸಲು ತೀರ್ಮಾನಿಸಿದೆ. ಆ ದಿವಸ ರೈತ, ಕೃಷಿ ಕೂಲಿಗಾರ ಮತ್ತು ಕಾರ್ಮಿಕರ ಬೃಹತ್ ಮತಪ್ರದರ್ಶನ ಮತ್ತು ಸಂಜೆ 4 ಗಂಟೆಗೆ ಜಿಲ್ಲಾಧಿಕಾರಿಯವರಿಗೆ ಮನವಿಯನ್ನು ಕೊಟ್ಟು ಸಂಜೆ 6ಕ್ಕೆ ನೆಹರೂ ಮೈದಾನದಲ್ಲಿ ಸಾರ್ವಜನಿಕ ಸಭೆಯು ಜರುಗಲಿದೆ. ಸಭೆಯಲ್ಲಿ ಜಿಲ್ಲೆಯ ರೈತ ಕಾರ್ಮಿಕರ ಮುಂದಾಳು ಕಾಂ. ಪಿ. ರಾಮಚಂದ್ರರಾವ್ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಮುಂತಾದವರು ಭಾಷಣ ಮಾಡುವರು.

ಕುಂದಾಪುರ, ಸುಳ್ಯ, ಪುತ್ತೂರು, ಬಂಟ್ವಾಳ, ಗಂಜಮಠ ಮುಂತಾದ ಕಡೆಗಳಿಂದ ರೈತಕಾರ್ಮಿಕರು ಜಾಥಾದಲ್ಲಿ ಬಂದು ಪ್ರದರ್ಶನದಲ್ಲಿ ಭಾಗವಹಿಸುವರು.

ಬೇಡಿಕೆ ದಿನಾಚರಣೆಯನ್ನು ಯಶಸ್ವಿಗೊಳಿಸಲು ದ. ಕ. ಜಿಲ್ಲೆಯ ಸಿ. ಐ. ಟಿ.ಯು.ಗೆ ಸೇರಿದ ಎಲ್ಲಾ ಯೂನಿಯನ್ನುಗಳು ಈಗಾಗಲೇ ಸಿದ್ಧತೆಗಳನ್ನು ನಡೆಸುತ್ತಿವೆ.

●

ಸಿ.ಐ.ಟಿ.ಯು. ಕಾರ್ಮಿಕರ ಮೇಲೆ ಪೋಲೀಸ್ ದಬ್ಬಾಳಿಕೆಯ ಖಂಡನೆ

ಇತ್ತೀಚಿನ ದಿನಗಳಲ್ಲಿ ಕೊಡಗು ಜಿಲ್ಲೆಯ ಕುದುರೆಮುಖ ಮತ್ತು ದಾಂಡೇಲಿಯಲ್ಲಿ ಸಿ.ಐ.ಟಿ.ಯು. ಗೆ ಸೇರಿದ ಕಾರ್ಮಿಕರ ಮೇಲೆ ಪೋಲೀಸರು ದಬ್ಬಾಳಿಕೆ ನಡೆಸುವುದು, ಸುಳ್ಳು ಕೇಸು ಹಾಕುವುದು ಇತ್ಯಾದಿಗಳನ್ನು 11-11-1979 ರಂದು ಸೇರಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯ ವಿಸ್ತೃತ ಸಭೆಯು ಗಂಭೀರವಾಗಿ ಪರಿಗಣಿಸಿತು. ತಕ್ಷಣವೆ ಮಧ್ಯ ಪ್ರವೇಶ ಮಾಡಿ, ಕಾರ್ಮಿಕರಿಗೆ ನ್ಯಾಯ ಒದಗಿಸುವಂತೆ ಸರಕಾರವನ್ನು ಒತ್ತಾಯಿಸಿದ ಸಭೆಯು, ನೂರಾರು ಕಾರ್ಮಿಕರ ಮೇಲೆ ಹೇರಿದ ಸುಳ್ಳು ಮೊಕದ್ದಮೆಗಳನ್ನು ಹಿಂತೆಗೆಯುವಂತೆಯೂ ಒತ್ತಾಯಿಸಿತು. ○

○

ಬಂಡಾಯ ಸಾಹಿತ್ಯ ಸಮ್ಮೇಳನಕ್ಕೆ ಎಸ್.ಎಫ್.ಐ. ಬೆಂಬಲ

ಕೋಮುವಾದಿ ಮತ್ತು ಸರ್ವಾಧಿಕಾರಿ ಶಕ್ತಿಗಳನ್ನು ವಿರೋಧಿಸುವಂತವರು, ದೀನ ದಲಿತರ ಸಂಕಷ್ಟಗಳ ಬಗ್ಗೆ ಶ್ರಮಿಸುತ್ತಿರುವ ಬುದ್ಧಿಜೀವಿಗಳ ತಂಡದವರು, ರೈತ ಕಾರ್ಮಿಕರ ಮತ್ತು ಸಾಮಾನ್ಯ ವರ್ಗದ ಸಂಕಷ್ಟಗಳ ಬಗ್ಗೆ ಸಂಘಟಿಸುವಂತಹ ಕಾರ್ಮಿಕ ಮುಖಂಡರು, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ವಿಚಾರದ ಬಗ್ಗೆ ಆಸಕ್ತಿಯುಳ್ಳವರು ಒಂದೆಡೆ ಸೇರಿ ಡಿಸೆಂಬರ್ ತಿಂಗಳಿನೊಳಗೆ "ಬಂಡಾಯ ಸಾಹಿತ್ಯ ಸಮ್ಮೇಳನ"ವನ್ನು ತುಮಕೂರಿನಲ್ಲಿ ನಡೆಸಬೇಕೆಂದು ಬಂಡಾಯ ಸಾಹಿತ್ಯ ಸಂಘಟನಾ ಸಮಿತಿಯವರು ತೆಗೆದುಕೊಂಡಿರುವ ತೀರ್ಮಾನವನ್ನು ಭಾರತೀಯ ವಿದ್ಯಾರ್ಥಿ ಫೆಡರೇಷನ್ನಿನ ತುಮಕೂರು ಶಾಖೆಯು ಸ್ವಾಗತಿಸಿದೆ.

ಮಲೆನಾಡು ಪ್ರಾದೇಶಿಕ ಸಮಿತಿ ರಚನೆ

ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಪಕ್ಷದ ಸಂಘಟನಾ ಕೆಲಸವನ್ನು ನೋಡಿಕೊಳ್ಳುವುದಕ್ಕಾಗಿ ತಾ. 11-11-1979 ರಂದು ಸೇರಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯ ವಿಸ್ತೃತ ಸಭೆಯು ಐದು ಸದಸ್ಯರಿರುವ "ಮಲೆನಾಡು ಪ್ರಾದೇಶಿಕಸಮಿತಿ"ಯನ್ನು ನೇಮಿಸಿದೆ. ಕಾಂ. ಸಿ. ನಂಜುಂಡಪ್ಪನವರು ಕಾರ್ಯದರ್ಶಿಯಾಗಿರುವ ಈ ಸಮಿತಿಯಲ್ಲಿ ಕಾಂ. ರಾಮದಾಸ್, ಕಾಂ. ವಿಶ್ವನಾಥ್, ಕಾಂ. ಎ.ಸಿ. ಕೇಶವ ಮತ್ತು ಕಾಂ. ಪಿ. ಸುಕುಮಾರ್ ಇವರುಗಳು ಇತರ ಸದಸ್ಯರುಗಳಾಗಿರುವರು.

●

ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿ ಕಾಂ. ಮಹಮದ್ ಹಸನ್ ಆಯ್ಕೆ

ನವೆಂಬರ್ 11ರಂದು ಬೆಂಗಳೂರಿನಲ್ಲಿ ಸೇರಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯ ವಿಸ್ತೃತ ಸಭೆಯು ಹಿರಿಯ ಮತ್ತು ಅನುಭವಿ ಕಾಂ. ಮಹಮದ್ ಹಸನ್ ಖಾನ್ ಇವರನ್ನು ಪಕ್ಷದ ಗುಲ್ಬರ್ಗ ಜಿಲ್ಲಾ ಸಮಿತಿಗೆ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿದೆ. ಪಕ್ಷದ ಜಿಲ್ಲಾ ಸಮಿತಿಯಲ್ಲಿ ನಡೆದ ಚರ್ಚೆ ಮತ್ತು ಬಂದ ಸೂಚನೆಗಳ ಆಧಾರದಲ್ಲಿ ರಾಜ್ಯ ಸಮಿತಿಯು ಈ ನಿರ್ಣಯವನ್ನು ತೆಗೆದುಕೊಂಡಿದೆ.

○

"ಎವರೇಜಿನ" ಹೆಸರಲ್ಲಿ ಬೀಡಿ ದಂಡ ವಸೂಲಿ ನಿಲ್ಲಬೇಕು

ತಾ. 4-11-1979 ರಂದು ಸೇರಿದ ಮಂಗಳೂರು ತಾಲ್ಲೂಕು ಗುರುಪುರ ಸುರತ್ಕಲ್ ಪ್ರದೇಶ ಬೀಡಿ ಯೂನಿಯನ್ನಿನ ಕಾರ್ಯಕಾರಿ ಸಮಿತಿಯು ಈ ಪ್ರದೇಶದ ಬೀಡಿ ಸಂಘಟನೆಯ ಬಗ್ಗೆ ಚರ್ಚಿಸಿ, ತಾ. 21-11-1979 ರಂದಿನ ರೈತರ ಬೇಡಿಕೆ ದಿನದಂದು ಕುಪ್ಪೆಪದವುನಿಂದ ಮಂಗಳೂರಿನ ಜಾಥವನ್ನು ಏರ್ಪಡಿಸಲು ನಿರ್ಣಯಿಸಿತು. ಯೂನಿಯನ್ನಿನ ಕಾರ್ಯದರ್ಶಿ ಕಾಂ. ಎಂ. ಹೊನ್ನಯನವರು ಚಟುವಟಿಕೆಯ ವರದಿಯನ್ನು ಸಭೆಯ ಮುಂದಿಟ್ಟರು.

1974 ರಿಂದ ಎಲೆ ಮತ್ತು ತಂಬಾಕಿನ ಎವರೇಜನ್ನು ಏರಿಸಿ ಈಗ ಎವರೇಜಿಗಿಂತ ಕಡಿಮೆ ಬೀಡಿಯಾಗಿದೆ ಎಂಬ ನೆಪದಲ್ಲಿ ಕಂಟ್ರಾಕ್ಟ್‌ದಾರರು ಮಜೂರಿಯಿಂದ ದಂಡ ವಸೂಲು ಮಾಡುವುದನ್ನು ವಿರೋಧಿಸಿ ಈ ಎವರೇಜು 1974 ರಂತೆ ನಿಗದಿಮಾಡಬೇಕೆಂದು ಒತ್ತಾಯಿಸಲು ತೀರ್ಮಾನಿಸಲಾಯಿತು.

ಮಾಲಕರ ಮುಂದಿಟ್ಟ ಬೇಡಿಕೆಯ ಬಗ್ಗೆ ವಿವರಿಸಿ ಅದನ್ನು ಒತ್ತಾಯಿಸಲು ಚಳುವಳಿ ನಡೆಸಬೇಕೆಂಬ ನಿರ್ಣಯವನ್ನು ಕೈಗೊಳ್ಳಲಾಯಿತು.

ಬೆಂಗಳೂರಿನ ಮೈಕೋ ಕಾರ್ಮಿಕರ ಹೋರಾಟಕ್ಕೆ ಬೆಂಬಲ ನೀಡುವ ನಿರ್ಣಯವು ಅಂಗೀಕರಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಕಾಂ. ಕೆ. ಮೂಸಬ್ಬರು ವಹಿಸಿದ್ದರು. ○

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಆರ್ಥಿಕ ಸಮೀಕ್ಷೆ:

—ಆರ್. ಚಂದ್ರ

ಪರಿಶಿಷ್ಟ: ಮೂರು ವೈರಿಗಳು

ಭಾರತದ ಸ್ವಾತಂತ್ರ್ಯ ಹೋರಾಟವು ಪೂರ್ಣಗೊಳ್ಳಲು ಜನತಾ ಪ್ರಜಾಸತ್ತಾತ್ಮಕ ಕ್ರಾಂತಿಯು ಸಫಲವಾಗಲು ಸಧ್ಯದ ವಿದೇಶಿ ಬಂಡವಾಳ, ಗುತ್ತೇದಾರಿ ಬಂಡವಾಳ ಮತ್ತು ಭೂಮಾಲಕ ಪದ್ಧತಿ ಇವೇ ಮೂರು ವೈರಿಗಳ ವಿರುದ್ಧ ತೀವ್ರವಾದ ಸಂಘಟಿತ ಹೋರಾಟ ನಡೆಸಬೇಕಾಗಿದೆ. ಸ್ವಾತಂತ್ರ್ಯಾನಂತರ ಇವುಗಳ ವಿಸ್ತರಣೆ, ಬೆಳವಣಿಗೆಯ ಸಂಕ್ಷಿಪ್ತ ಸಮೀಕ್ಷೆಯನ್ನು ಇಲ್ಲಿ ನೀಡಲಾಗಿದೆ. ಹಿಂದೆ ಪ್ರಕಟಗೊಂಡಿರುವ ಆರ್ಥಿಕ ಸಮೀಕ್ಷೆಗಳಿಗೆ ಆಧಾರಿತವಾಗಿ ಪ್ರಕಟಿಸಲಾಗಿದೆ.

೧. ವಿದೇಶಿ ಬಂಡವಾಳ ಮತ್ತು ಸಾಲ:

(i) ವಿದೇಶಿ ಬಂಡವಾಳ:

ಸರಕಾರ ವಿದೇಶಿ ಬಂಡವಾಳದ ವಿರುದ್ಧ ಸಾಕಷ್ಟು ಗದ್ದಲ ಮಾಡುತ್ತಿದ್ದರೂ, ಸ್ವಾವಲಂಬನೆಯ ಕುರಿತು ಘೋಷಣೆ ಹಾಕುತ್ತಿದ್ದರೂ, ವಾಸ್ತವವಾಗಿ ದೇಶದಲ್ಲಿ ವಿದೇಶಿ ಬಂಡವಾಳವು ಹೆಚ್ಚುತ್ತಲೇ ಇದೆ. ಅದು ನಮ್ಮ ದೇಶದ ಮಾರುಕಟ್ಟೆಯನ್ನು ಆಕ್ರಮಿಸಿ ಸಂಪನ್ಮೂಲಗಳನ್ನು ಹೆಚ್ಚು ಹೆಚ್ಚು ಸೂರೆ ಮಾಡುತಲೇ ಇದೆ. ತಾ. 21-7-78ರ 'ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ಖಾಸಗೀ ಕ್ಷೇತ್ರದಲ್ಲಿ ವಿದೇಶಿ ಬಂಡವಾಳದ ಕುರಿತು ಸರಕಾರಿ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸಿದ ಮಾಹಿತಿಗಳು ಹೀಗಿವೆ.

ವರ್ಷ	ವಿದೇಶಿ ಬಂಡವಾಳ (ರೂ. ಕೋಟಿಗಳಲ್ಲಿ)
1948	265
1961	678
1965-66	1069
1967-78	1466
1973	1816
1977-78ಅಂದಾಜು	2000

ದೇಶಗಳು	1972 ರಲ್ಲಿ ವಿದೇಶಿ ಬಂಡವಾಳ (ರೂ. ಕೋಟಿಗಳಲ್ಲಿ)
ಇಂಗ್ಲೇಂಡ್	649.7
ಅಮೇರಿಕಾ(USA)	509.7
ಪ. ಜರ್ಮನಿ	156.2
ಇಟೆಲಿ	78.7
ಫ್ರಾನ್ಸ್	47.2
ಜಪಾನ್	49.3
ಒಟ್ಟು	1490.8

ಖಾಸಗೀ ಕ್ಷೇತ್ರದಲ್ಲಿ ತೊಡಗಿಸಿದ ವಿದೇಶಿ ಬಂಡವಾಳ ಸಂಬಂಧಪಟ್ಟ ದೇಶಗಳಿಂದ ನೇರವಾಗಿ ಬಂದಿರಬಹುದು ಅಥವಾ ಅವುಗಳ ಪ್ರತಿನಿಧಿಯಾದ ಎಯಿಡ್ ಇಂಡಿಯಾ ಕ್ಲಬ್, ಜಾಗತಿಕ ಬ್ಯಾಂಕ್ ಮತ್ತು ಅದರ ಅಂಗ ಸಂಸ್ಥೆಗಳಿಂದ ಬಂದಿರಬಹುದು.

ವಿದೇಶಿ ಖಾಸಗಿ ಕಂಪೆನಿಗಳು ತಮ್ಮ ಸ್ವದೇಶಕ್ಕೆ ಮರುಪಾವತಿ ಮಾಡುವುದು ಹೆಚ್ಚುತ್ತಿದೆ. 1965-66 ರಲ್ಲಿ ರೂ. 42.83 ಕೋಟಿ ಮತ್ತು 1974-75 ರಲ್ಲಿ ರೂ. 83 37 ಕೋಟಿ. ಆದರೆ, ಇದರಲ್ಲಿ ಲಾಭಾಂಶವೇ ಹೆಚ್ಚು. ತಂತ್ರಜ್ಞಾನ ನೀಡಿದ ಪ್ರತಿಫಲದ ಮರುಪಾವತಿ ಕಡಿಮೆಯಾಗುತ್ತಿದೆ. 1967-68 ರಲ್ಲಿ ರೂ. 14.68 ಕೋಟಿ. 1968-69 ರಲ್ಲಿ ರೂ. 17.97 ಕೋಟಿ, 1974-75 ರಲ್ಲಿ ರೂ. 12.56 ಕೋಟಿ.

ತಾ. 18-9-77ರ 'ಇಲ್ಲಿಸ್ಟ್ರೇಟೆಡ್ ವೀಕ್ಲಿ' ಯಲ್ಲಿ ಪ್ರೊ. ಎ. ಎನ್. ಒಝೂರವರ ಸಮೀಕ್ಷೆಯಂತೆ, ನಮ್ಮ ದೇಶದಲ್ಲಿ ಹತ್ತು ಅತಿದೊಡ್ಡ ವಿದೇಶಿ ಕಂಪೆನಿಗಳ ಆಸ್ತಿ ಮೌಲ್ಯಗಳು ಹೀಗಿವೆ.

ಕ್ರಮಾಂಕ	ಕಂಪೆನಿಗಳು	1966ರಲ್ಲಿ ಆಸ್ತಿಮೌಲ್ಯ (ರೂ. ಕೋಟಿಗಳಲ್ಲಿ)	1975ರಲ್ಲಿ ಆಸ್ತಿಮೌಲ್ಯ (ರೂ. ಕೋಟಿಗಳಲ್ಲಿ)
1.	ಇಂಪಿರಿಯಲ್ ಟೊಬೆಕೊ (UK)	34	105
2.	ಇಂಡಿಯನ್ ಅಲ್ಯೂಮಿನಿಯಂ	29	101
3.	ಡನ್‌ಲಾಪ್ ರಬ್ಬರ್ (UK)	22	86
4.	ಹಿಂದೂಸ್ಥಾನ್ ಲಿವರ್ (UK)	33	79
5.	ಯೂನಿಯನ್ ಕಾರ್ಬೈಡ್ (USA)	28	56
6.	ಫಿಲಿಪ್ಸ್ ಇಂಡಿಯಾ (Holland)	18	53
7.	ಗೆಸ್ಟ್‌ಕೀನ್ ವಿಲಿಯಂಸ್ (UK)	34	49
8.	ಅಶೋಕ್ ಲೀಲಾಂಡ್ (UK)	19	46
9.	ಬ್ರೂಕ್ ಬಾಂಡ್ (UK)	18	42
10.	ಕಾಲ್‌ಟೆಕ್ಸ್ ಆಯಿಲ್ (UK)	18	41

1964-65ರಿಂದ 1969-70ರ ಅವಧಿಯಲ್ಲಿ 877 ವಿದೇಶಿ ಕಂಪೆನಿಗಳ ವ್ಯವಹಾರಗಳ ಕುರಿತು ರಿಸರ್ವ್ ಬ್ಯಾಂಕ್ 1974 ರಲ್ಲಿ ಈ ಕೆಳಗಿನ ಮಾಹಿತಿಗಳನ್ನು ಪ್ರಕಟಿಸಿದೆ.

(ರೂ. ಕೋಟಿಗಳಲ್ಲಿ)

ಹೊಸತಾಗಿ ತಂದ		ಗಳಿಸಿದ ಲಾಭ		ನಿವ್ವಳ ವಿದೇಶಕ್ಕೆರವಾನೆ
ಬಂಡವಾಳ	: 98.4,	ಇತ್ಯಾದಿ	204.9,	106.5
ಹೊಸತಾಗಿ ತಂದ ಸಾಲ	: 151.7,	ಸಾಲ ಮರುಪಾವತಿ ಪಡೆದದ್ದು, ಬಡ್ಡಿ ಗಳಿಸಿದ್ದು	: 186.6,	,, 33.9
ಭಾರತದಿಂದ ಆಮದು	: 728.7,	ಭಾರತಕ್ಕೆ ರಫ್ತು	: 1681.2,	,, 728.7
ಒಟ್ಟು ತಂದದ್ದು	: 978.8,	ಒಟ್ಟು ತೆಗೆದುಕೊಂಡದ್ದು	2072.7,	ಒಟ್ಟು ನಿವ್ವಳ ರವಾನೆ 1092.9

ವಿದೇಶಿ ಬಂಡವಾಳಗಾರರು ಸ್ವದೇಶಿ ಗುತ್ತೇದಾರಿ ಬಂಡವಾಳಗಾರರೊಂದಿಗೆ ಸಧ್ಯ 5000 ರಷ್ಟು ಸಹೋದ್ಯೋಗ (collaboration) ಒಪ್ಪಂದಗಳನ್ನು ಮಾಡಿಕೊಂಡಿವೆ! ಇತ್ತೀಚಿಗಿನ ವರುಷಗಳಲ್ಲಿ ವಿದೇಶಿ ಬಂಡವಾಳಗಾರರು ಸ್ವದೇಶಿ ಗುತ್ತೇದಾರಿ ಬಂಡವಾಳಗಾರರೊಂದಿಗೆ ಅಭಿವೃದ್ಧಿ ಹೊಂದುತ್ತಿರುವ ಏಷ್ಯಾದ, ಅಮೇರಿಕಾ ಮತ್ತು ಆಫ್ರಿಕ ದೇಶಗಳಲ್ಲಿಯೂ ತಮ್ಮ ಸಹೋದ್ಯೋಗ ವ್ಯವಹಾರಗಳನ್ನು ಗಣನೀಯ ಪ್ರಮಾಣದಲ್ಲಿ ನಡೆಸುತ್ತಿವೆ. ಭಾರತದಲ್ಲಿರುವ ವಿದೇಶಿ ಖಾಸಗೀ ಕಂಪೆನಿಗಳಲ್ಲಿ ಪ್ರಪಂಚದ ರಾಕ್ಷಸ ಗಾತ್ರದ ಬಹುರಾಷ್ಟ್ರೀಯ ಕೈಗಾರಿಕಾ ಸಂಸ್ಥೆಗಳಿಗೂ ಸೇರಿದವುಗಳಿವೆ. ವಿದೇಶಿ ಕಂಪೆನಿಗಳು, ಮುಖ್ಯವಾಗಿ ಬಹುರಾಷ್ಟ್ರೀಯ ಕಂಪೆನಿಗಳು ತಾವು ತಂದ ಸಾಲ, ಬಂಡವಾಳವನ್ನು ಲಾಭಗಳಿಕೆಯ ಮೂಲಕ ಮೂರು ನಾಲ್ಕು ವರುಷಗಳಲ್ಲಿಯೇ ಮರಳಿ ಪಡೆಯುತ್ತವೆ. ಅವುಗಳ ಉತ್ಪಾದನೆಯ ವೇಗಕ್ಕಿಂತಲೂ ಅವುಗಳ ಆಸ್ತಿ ಮೌಲ್ಯ ಹೆಚ್ಚಳದ ವೇಗ ಹೆಚ್ಚು. ಅವುಗಳು ನೀಡುವ ತಾಂತ್ರಿಕ ಮೌಲ್ಯ ಗೌಣವಾದುದು. ಅವುಗಳು ಅತಿ ಲಾಭ ಗಳಿಸುವುವು. ಔಷಧಿ ವಸ್ತುಗಳ ಉತ್ಪಾದನೆ ಮತ್ತು ಮಾರಾಟಗಳಲ್ಲಿ ಈ ಕಂಪೆನಿಗಳು ತಮ್ಮ ದೇಶಗಳಲ್ಲಿ ಪಡೆಯುವ ಲಾಭಕ್ಕಿಂತ ಸಾವಿರಾರುಪಟ್ಟು ಹೆಚ್ಚುಲಾಭಗಳಿಸುವುವು. ನಮ್ಮ ದೇಶದ ಘನ ಉದ್ಯಮಗಳಲ್ಲಿ ಮತ್ತು ಜೀವನಾವಶ್ಯಕ ದಿನಬಳಕೆಯ ವಸ್ತುಗಳಲ್ಲಿ ವ್ಯಾಪಕವಾಗಿ ಪ್ರವೇಶಿಸಿ ದೇಶದ ಮಾರುಕಟ್ಟೆಯನ್ನು ಸಾಕಷ್ಟು ಗಿಟ್ಟಿಸಿಕೊಂಡಿವೆ. ಗುಡಿಕೈಗಾರಿಕೆಗಳನ್ನೂ, ಸಣ್ಣ ಮತ್ತು ಮಧ್ಯಮ ಮಟ್ಟದ ಕೈಗಾರಿಕಾ ಸಂಸ್ಥೆಗಳನ್ನೂ ದಿವಾಳಿ ಕೆಡವುತ್ತಿವೆ. ಸ್ವದೇಶಿ ಗುತ್ತೇದಾರಿ ಬಂಡವಾಳಗಾರರೂ ವಿದೇಶಿ ಬಹುರಾಷ್ಟ್ರೀಯ ಬಂಡವಾಳಗಾರರೂ ನಮ್ಮ ದೇಶದ ಮಾರುಕಟ್ಟೆಯನ್ನು ಹಂಚಿಕೊಂಡು, ತಮ್ಮ ಅತಿ ಲಾಭದಿಂದ ಬೆಲೆಏರಿಕೆ, ನಿರುದ್ಯೋಗ, ಆರ್ಥಿಕ ದುಃಸ್ಥಿತಿಗಳಿಗೆ ಕಾರಣವಾಗಿವೆ. ರಾಜಕೀಯ, ಸಾಂಸ್ಕೃತಿಕ ವಿಷಯಗಳಲ್ಲಿಯೂ ಇವು ಹಸ್ತಕ್ಷೇಪ ಮಾಡುತ್ತಿವೆ. 'ಸ್ವಾತಂತ್ರ್ಯ' ಮತ್ತು 'ಸ್ವಾವಲಂಬನೆ'ಗಳಿಗಾಗಿ ಯೋಜನಾಬದ್ಧ ಆರ್ಥಿಕ ಅಭಿವೃದ್ಧಿಗಾಗಿ ಇವುಗಳನ್ನು ಪರಿಹಾರವಿಲ್ಲದೆ ಅಥವಾ ಅಲ್ಪ ಪರಿಹಾರವಿತ್ತು ರಾಷ್ಟ್ರೀಕರಿಸಬೇಕು.

(ii) ವಿದೇಶಿ ಸಾಲ, ನೆರವು:

ವರ್ಷ	ಸಾಲ (ರೂ. ಕೋಟಿಗಳಲ್ಲಿ)
1950-51ರಲ್ಲಿ	32
1960-61ರಲ್ಲಿ	1001
1965-66ರಲ್ಲಿ	3154
1970-71ರಲ್ಲಿ	7223
1971-72ರಲ್ಲಿ	7598

ಸಾಧಾರ: ಪೊಕೆಟ್ ಬುಕ್ ಆಫ್ ಇಕನಾಮಿಕ್ ಇನ್‌ಫಾರ್ಮೇಶನ್ & ಬಡ್ಜೆಟ್ ಮೆಮೊರಾಂಡಮ್ಸ್. ಸಾಲ ಮತ್ತು ನೆರವುಗಳಲ್ಲಿ ಶೇ. 92 ರಷ್ಟು ಸಾಲ ಮತ್ತು ಶೇ. 8 ರಷ್ಟು ನೆರವು. ಅವುಗಳಲ್ಲಿ ಸೋವಿಯೆತ್ ಯೂನಿಯನ್ ಮತ್ತು ಇತರ ಸಮಾಜವಾದಿ ರಾಷ್ಟ್ರಗಳಿಂದ ಕೇವಲ ಶೇ. 8 ರಷ್ಟು ಮತ್ತು ಬಂಡವಾಳಶಾಹಿ ರಾಷ್ಟ್ರಗಳಿಂದ ಶೇ. 92 ರಷ್ಟು. ಪಂಚವಾರ್ಷಿಕ ಯೋಜನೆ ಪ್ರಾರಂಭವಾದಂದಿನಿಂದ ವಿದೇಶಿ ಸಾಲ ಹೆಚ್ಚುತ್ತಲೇ ಇದೆ. ಅದರೊಂದಿಗೆ ಮರುಪಾವತಿಯೂ ಹೆಚ್ಚುತ್ತಿದೆ. ಪರಿಣಾಮವಾಗಿ ಇತ್ತೀಚಿಗಿನ ವರುಷಗಳಲ್ಲಿ ದೊರಕಿದ ಸಾಲದಲ್ಲಿ ಮರುಪಾವತಿ ಕಳೆದ ಮೇಲೆ ನಿವ್ವಳವಾಗಿ ದೊರಕುವ ಸಾಲವೂ ಅತ್ಯಲ್ಪವಾಗುತ್ತಾ ಬರುತ್ತಿದೆ. ಉದಾಹರಣೆಗೆ, 1969-70 ರಲ್ಲಿ ರೂ. 837 ಕೋಟಿ ಸಾಲ ದೊರಕಿದ್ದರಲ್ಲಿ ರೂ. 380 ಸಾಲ ಮರುಪಾವತಿಯಾಗಿ, ನಿವ್ವಳ ಸಾಲ ರೂ. 457 ಕೋಟಿ ದೊರಕಿತು. 1975-76 ರಲ್ಲಿ ರೂ. 1744 ಕೋಟಿ ಸಾಲ ದೊರಕಿದ್ದರಲ್ಲಿ ರೂ. 651 ಕೋಟಿ ಸಾಲ ಮರುಪಾವತಿಯಾಗಿ, ನಿವ್ವಳ ರೂ. 1093 ಕೋಟಿ ಸಾಲ ದೊರಕಿತು. ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ರೂ. 5834 ಕೋಟಿ ನಿವ್ವಳ ವಿದೇಶಿ ಸಾಲ ನಿರೀಕ್ಷಿಸಲಾಗಿತ್ತು. ಸಾಲ ಮರುಪಾವತಿಯೂ ಸೇರಿದಂತೆ ರೂ. 9000 ಕೋಟಿಯಷ್ಟು ವಿದೇಶಿ ಸಾಲ ನಿರೀಕ್ಷಿಸಲಾಗಿತ್ತು! ಆರನೇ ಯೋಜನೆ (1978-83) ಯಲ್ಲಿ ರೂ. 3955 ಕೋಟಿ ನಿವ್ವಳ ವಿದೇಶಿ ಸಾಲ ನಿರೀಕ್ಷಿಸಲಾಗಿದೆ. ಮರುಪಾವತಿಯೂ ಸೇರಿದಂತೆ ಈ ಯೋಜನೆಯೂ ಹೆಚ್ಚಾಗಿ ವಿದೇಶಿ ನೆರವನ್ನೇ ಅವಲಂಬಿಸಿದೆ. ಹಳೆಯ ಸಾಲವನ್ನು ತೀರಿಸಲು ಹೊಸ ಸಾಲ; ಸಾಲ ಇನ್ನಷ್ಟು ಪಡೆಯಲು ಕೆಲವೊಮ್ಮೆ ಹಳೆಯ ಸಾಲದ ಮರುಪಾವತಿಯನ್ನು ರಿಯಾಯತಿಗೊಳಿಸುವುದೂ ಉಂಟು! 'ಸ್ವಾತಂತ್ರ್ಯ' ಮತ್ತು 'ಸ್ವಾವಲಂಬನೆ' ಗಳಿಗಾಗಿ ವಿದೇಶಿ ಸಾಲಗಳ ಮೇಲೆ ಅವಲಂಬಿಸುವುದನ್ನು ಬಿಟ್ಟು ಅಭಿವೃದ್ಧಿ ಹೊಂದಿದ ದೇಶಗಳು ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ರಫ್ತು ಮಾಡುತ್ತಿರುವ ವಸ್ತುಗಳಿಗೆ ಯೋಗ್ಯ ಬೆಲೆಗಳನ್ನು ಕೊಡಲು ಒತ್ತಾಯಿಸಬೇಕು ಮತ್ತು ಅಭಿವೃದ್ಧಿ ಹೊಂದಿದ ದೇಶಗಳು ರಫ್ತು ಮಾಡುತ್ತಿರುವ ವಸ್ತುಗಳಿಗೆ ಅತಿಲಾಭ ಕೂಡಿದ

1971-72ರಲ್ಲಿ ವಿವಿಧ ದೇಶಗಳಿಂದ ಸಾಲ, ನೆರವು

(ರೂ. ಕೋಟಿಗಳಲ್ಲಿ

ದೇಶ		
ಅಮೇರಿಕಾ (USA)	:	5349
ಇಂಗ್ಲೇಂಡ್	:	705
ಪ. ಜರ್ಮನಿ	:	448
ಜಪಾನ್	:	292
ಇತರ ಬಂಡವಾಳಶಾಹಿ ರಾಷ್ಟ್ರಗಳಿಂದ	:	388
ಸೋವಿಯೆತ್ ಯೂನಿಯನ್ ಮತ್ತಿತರ ಸಮಾಜವಾದಿ ದೇಶಗಳಿಂದ	:	416
ಒಟ್ಟು		7598

[6ನೇ ಪುಟ ನೋಡಿ]

ಕೋಮು ಗಲಭೆಗಳಲ್ಲಿ ಆರೆಸ್ಸೆಸ್ ಪಾತ್ರವಿಲ್ಲವೆ ?

ನಮ್ಮ ದೇಶದಲ್ಲಿ ನಡೆದ ಯಾವುದೇ ಕೋಮುಗಲಭೆಗಳಿಗೆ ಆರೆಸ್ಸೆಸ್ ಕಾರಣವೆಂದು ಈ ವರೆಗೆ ಯಾವ ವಿಚಾರಣಾ ಆಯೋಗವೂ ಹೇಳಿಲ್ಲವೆಂದು ಆರೆಸ್ಸೆಸ್ ಪ್ರಮುಖ ಬಾಳಾಸಾಹೇಬ ದೇವರಸ್ ಪದೇ ಪದೇ ಹೇಳುತ್ತಿದ್ದಾರೆ. ದೇವರಸ್ ಅಪ್ಪಟ ಹಿಂದೂ ಕೋಮುವಾದಿ ಮಾತ್ರವೇ ಅಲ್ಲ- ಅವರು ಸತ್ಯವನ್ನೂ ನಂಬುವವರಲ್ಲವೆನ್ನುವುದಕ್ಕೆ 1971ರ ತಲಚೇರಿ ಕೋಮುಗಲಭೆಗಳ ಬಗ್ಗೆ ನಿವೃತ್ತ ಹೈಕೋರ್ಟು ನ್ಯಾಯಾಧೀಶ ಶ್ರೀ ಜೋಸೆಫ್ ವಿಧಯಾತಿಲ್ ಅವರ ವಿಚಾರಣಾ ಆಯೋಗ ನೀಡಿದ್ದ ವರದಿಯಿಂದ ಉದ್ಧರಿಸಲ್ಪಟ್ಟ ಈ ಕೆಳಗಿನ ಸಾಲುಗಳೇ ಸಾಕ್ಷಿ.

ಪರಿಚ್ಛೇದ 209:- "ಈ ಪ್ರದೇಶದಲ್ಲಿ ಮುಸ್ಲಿಂ ವಿರೋಧಿ ಮತ್ತು ಲೀಗ್ ವಿರೋಧಿ ಚಳುವಳಿಯನ್ನು ನಡೆಸಿದ ಪಕ್ಷಗಳಲ್ಲಿ ಮುಖ್ಯವಾದುವು ಆರೆಸ್ಸೆಸ್ ಮತ್ತು ಜನಸಂಘವೆನ್ನುವುದು ಸಂಶಯಾತೀತ. ಆರೆಸ್ಸೆಸ್ ಇಲ್ಲಿ ವಹಿಸಿದ ಪಾತ್ರವು ಅದು ದೇಶಾದ್ಯಂತ ತಾನು ಅನುಸರಿಸುತ್ತಿರುವ ಮುಸ್ಲಿಂ ವಿರೋಧಿ ನೀತಿಗೆ ಅನುಗುಣವಾಗಿಯೇ ಇದೆ. ಆರೆಸ್ಸೆಸ್ ಮುಸ್ಲಿಮರ ವಿರುದ್ಧ ಹೊಂದಿರುವ ಆಳವಾದ ದ್ವೇಷ ಮತ್ತು ಮುಸ್ಲಿಂಲೀಗಿನ ಬಗ್ಗೆ ಅದು ತಳೆದಿರುವ ವರ್ತನೆಯನ್ನು ಅರಿತುಕೊಳ್ಳಬೇಕಾದರೆ ಗೋಲ್ವಾಲ್ಕರ್ ಬರೆದಿರುವ 'ಬಂಚ್ ಆಫ್ ಥಾಟ್ಸ್' (Bunch of Thoughts) ಪುಸ್ತಕವನ್ನು ಓದಿದರೆ ಸಾಕು. ಈ ಪುಸ್ತಕದ 172 ಮತ್ತು 173ನೇ ಪುಟಗಳಲ್ಲಿ ಈ ರೀತಿ ಹೇಳಲಾಗಿದೆ.

"ಮುಸ್ಲಿಂ ಲೀಗ್ ಮತ್ತೊಮ್ಮೆ ದಕ್ಷಿಣದಲ್ಲಿ ತಲೆಯೆತ್ತುತ್ತಿದೆ. ಪಾಕಿಸ್ತಾನದ ನಿರ್ಮಾಣದಿಂದಾಗಿ ಉತ್ತರ ಭಾರತದ ಹಿಂದೂಗಳು ತತ್ಕಾಲದ ಮಟ್ಟಿಗಾದರೂ ಮುಸ್ಲಿಂ ಲೀಗಿನ ಅಪಾಯದ ಬಗ್ಗೆ ಎಚ್ಚತ್ತುಕೊಂಡಿದ್ದಾರೆ. ಹಾಗಾಗಿ ಲೀಗ್ ಮುಂದಾಳುಗಳು ತಮ್ಮ ಕಾರ್ಯಕ್ಷೇತ್ರದ ಕೇಂದ್ರವನ್ನು ದಕ್ಷಿಣಕ್ಕೆ ವರ್ಗಾಯಿಸಿಕೊಂಡಿದ್ದಾರೆ. ಅವರು ಇಷ್ಟು ವರ್ಷಗಳವರೆಗೂ ತಮ್ಮ ಚಟುವಟಿಕೆಗಳನ್ನು ಗುಪ್ತವಾಗಿ ನಡೆಸಿಕೊಂಡು ಬರುತ್ತಿದ್ದೆವೆಂದೂ ಈಗ ಬಹಿರಂಗವಾಗಿ ಹೇಳಿಕೊಳ್ಳುತ್ತಿದ್ದಾರೆ. ಕೇರಳದ ಕಮ್ಯುನಿಸ್ಟ್ ಸರಕಾರವನ್ನು ಪತನಗೊಳಿಸಿದ ಬೃಹತ್ ಆಂದೋಲನವು (1959) ಅವರಿಗೆ ತಮ್ಮ ಚಟುವಟಿಕೆಗಳನ್ನು ಬಹಿರಂಗವಾಗಿ ನಡೆಸಲು ಅನುಕೂಲ ವಾತಾವರಣವನ್ನು ನಿರ್ಮಿಸಿಕೊಟ್ಟಿತು. ಇದರ ಹಿಂದೆಯೇ ಬಂದ ಚುನಾವಣೆಗಳಂತೂ ಲೀಗಿನ ಪಾಲಿಗೆ ದೊಡ್ಡ ವರದಾನವಾಗಿ ಪರಿಣಮಿಸಿತು. ಮುಸ್ಲಿಂಲೀಗನ್ನು ಓಲೈಸುವ ತನ್ನ ಧೋರಣೆ ದೇಶದ ವಿಭಜನೆಯಂತಹ ಅನಾಹುತಕ್ಕೆ ಕಾರಣವಾಗಿದ್ದರೂ ಕಾಂಗ್ರೆಸ್ ತನ್ನೀ ಅನುಭವದಿಂದ ಯಾವ ಪಾಠವನ್ನೂ ಕಲಿಯದೆ ಮತ್ತೊಮ್ಮೆ ಚುನಾವಣೆಯ ವೇಳೆ ಈ ವಿಶ್ವಾಸಘಾತುಕ ಪಕ್ಷವಾದ ಲೀಗನ್ನು ಕೈನೀಡಿ ಆಲಂಗಿಸಿಕೊಂಡಿತು. ತಮ್ಮ ಈ ರಾಷ್ಟ್ರವಿರೋಧಿ ನಿಲುಮೆಯನ್ನು ಸಮರ್ಥಿಸಿಕೊಳ್ಳಲು ಪಂಡಿತ್ ಜವಾಹರಲಾಲ ನೆಹರೂ ಅವರು ಮುಸ್ಲಿಂಲೀಗ್ ಹಳೆಯ ಲೀಗ್ ಅಲ್ಲವೆಂದೂ ಅದು ಮುಸ್ಲಿಂ ಸಮುದಾಯಕ್ಕೂ ಇಸ್ಲಾಂ ಧರ್ಮಕ್ಕೂ ನಿಷ್ಠವಾದ ದೇಶಭಕ್ತಿಯುಳ್ಳ ಹೊಸ ರಾಜಕೀಯ ಪಕ್ಷವೆಂದೂ ಅದರ ಪರಿಶುದ್ಧತೆಯ ಬಗ್ಗೆ ಸರ್ಟಿಫಿಕೇಟ್ ನೀಡಿದರು! ದೇಶಭಕ್ತಿಯ ಬಗ್ಗೆ ಎಂತಹ ನಿರ್ವಚನೆ! ನೆಹರೂ ಅವರ ದುರದೃಷ್ಟಕ್ಕೆ ಸರಿಯಾಗಿ ಮರುದಿನವೇ ಮುಸ್ಲಿಂ ಲೀಗಿನ ಅಖಿಲ ಭಾರತ ಅಧ್ಯಕ್ಷರು ಹೇಳಿಕೆ ನೀಡಿ ತಮ್ಮ ಪಕ್ಷವು ಹಳೆಯ ಮುಸ್ಲಿಂಲೀಗೇ ಹೊರತು ಅದರಲ್ಲಿ ಎಳ್ಳಷ್ಟೂ ಪರಿವರ್ತನೆಯಾಗಿಲ್ಲವೆಂದು ಸಾರಿಬಿಟ್ಟರು! ಇದೀಗ ಅವರು, ಕೇರಳದಲ್ಲಿ ತಮ್ಮದೇ ಪ್ರತ್ಯೇಕ 'ಮೋಪ್ಲಾ ನಾಡು' ಬೇಕೆಂದು ಪ್ರತಿಪಾದಿಸುತ್ತಿದ್ದಾರೆ."

"ಕಳೆದ ಅರ್ಧ ಶತಮಾನಕ್ಕಿಂತಲೂ ಹೆಚ್ಚಿನ ಅವಧಿಯಲ್ಲಿ ಈ ದೇಶದೊಳಗೆ ನಡೆದ ಹಲವಾರು ಬೆಳವಣಿಗೆಗಳು ಮತ್ತೊಮ್ಮೆ ಜೀವಂತವಾಗುತ್ತಿರುವುದನ್ನು ಈ ವಿದ್ಯಮಾನಗಳಿಂದ ಕಂಡುಕೊಳ್ಳಬಹುದು. ಇಪ್ಪತ್ತರ ದಶಕದಲ್ಲಿ ನಮ್ಮ ದೇಶದ ಮುಂದಾಳುಗಳು ಮುಸ್ಲಿಮರ ಸ್ನೇಹವನ್ನು ಗಳಿಸಿಕೊಳ್ಳುವ ಸಲುವಾಗಿ 'ಖಿಲಾಫತ್' ಚಳುವಳಿಯಲ್ಲಿ (ತುರ್ಕಿಯ ರಾಜನನ್ನು ಪದಚ್ಯುತಗೊಳಿಸುವುದಕ್ಕಾಗಿ ಬ್ರಿಟಿಷರ ವಿರುದ್ಧ ನಡೆದ ಒಂದು ಆಂದೋಲನ) ಹಿಂದೂಗಳು ಅದು ತಮ್ಮದೇ ಹೋರಾಟ ಎಂದು ಭಾವಿಸಿ ಭಾಗವಹಿಸಬೇಕೆಂದೂ ಕರೆಯುತ್ತಿದ್ದರು. ಕೇರಳದಲ್ಲಿ ಹಿಂದೂಗಳು ಈ ಚಳುವಳಿಗೆ ಅಪಾರ ಜನ ಬೆಂಬಲವನ್ನೂ ಧನಸಹಾಯವನ್ನೂ ನೀಡಿದ್ದರು. ಆದರೆ ಬ್ರಿಟಿಷರ ವಿರುದ್ಧ ಪ್ರಾರಂಭವಾದ ಈ ಮುಸ್ಲಿಂ ಆಕ್ರೋಶ ಅತಿ ಶೀಘ್ರದಲ್ಲೇ 'ಹಿಂದೂ ಕಾಫಿರ'ರ ವಿರುದ್ಧ 'ಜೆಹಾದ್' ಆಗಿ ಪರಿವರ್ತನೆ ಹೊಂದಿತು. ಕೊಳ್ಳೆಯಿಕ್ಕುವುದು, ಕೊಲೆ, ಸುಲಿಗೆ, ಮಾನಭಂಗ, ಬಲಾತ್ಕಾರದ ಮತಾಂತರವೇ ಮುಂತಾದ ಬರ್ಬರ ಪಾಶವೀಕೃತ್ಯಗಳನ್ನು ಮುಸ್ಲಿಮರು ನಡೆಸಿದರು. ಈ ರಕ್ತ ಕುದಿಸುವ ಪಾಶವೀ ಕೃತ್ಯಗಳ ವಾರ್ತೆ ಬರುತ್ತಿದ್ದ ಸಮಯದಲ್ಲಿ ಈ ದೇಶದ ಓರ್ವ ಪ್ರಮುಖ ನೇತಾರರು ಈ ಮುಸ್ಲಿಂ ಗೂಂಡಾಗಳನ್ನು ಮುಕ್ತಕಂಠದಿಂದ ಪ್ರಶಂಸಿಸಿ ಅವರನ್ನು ಧೀರ ಮೋಪ್ಲಾಗಳೆಂದೂ ವರ್ಣಿಸಿದರು. ಈ ಮಾತುಗಳನ್ನು ನಮ್ಮ ಈಗಿನ ಮುಂದಾಳುಗಳು ಮುಸ್ಲಿಮರನ್ನು 'ದೇಶಭಕ್ತ'ರೆಂದು ವರ್ಣಿಸುತ್ತಿರುವುದರೊಂದಿಗೆ ಹೋಲಿಸಿದರೆ ಬಹುಕಾಲದಿಂದ ನಾವು ಅನುಸರಿಸಿಕೊಂಡು ಬಂದಿದ್ದ ಆತ್ಮಘಾತುಕ ನೀತಿ ನಮ್ಮ ರಾಷ್ಟ್ರೀಯ ಜಾಗೃತಿಯನ್ನೂ ದೇಶದ ಭದ್ರತೆಯ ಬಗ್ಗೆ ನಮಗಿರುವ ಕಳಕಳಿಯನ್ನೂ ಹೇಗೆ ಮೃತಗೊಳಿಸಿದೆಯೆಂಬುದು ಗೊತ್ತಾಗುತ್ತದೆ."

ಮೌಲಾನ ಮೊಹಮ್ಮದ್ ಆಲಿ ಬಗ್ಗೆ ತಮ್ಮ ಪುಸ್ತಕದ 177 ಪುಟದಲ್ಲಿ ಗೋಲ್ವಾಲ್ಕರ್ ಹೀಗೆ ಬರೆದಿದ್ದಾರೆ:

"ಗಾಂಧೀಜಿಯ ಬಲಗೈ ಬಂಟನಾಗಿರುವ ಮೌಲಾನ ಮೊಹಮ್ಮದ್ ಆಲಿ, 'ಓರ್ವ ಅತಿದೊಡ್ಡ ಪಾಪಿ ಮತ್ತು ವ್ಯಭಿಚಾರಿಯಾದ ಮುಸಲ್ಮಾನನು ಕೂಡಾ ನನ್ನ ದೃಷ್ಟಿಯಲ್ಲಿ ಗಾಂಧೀಜಿಗಿಂತಲೂ ಎಷ್ಟೋ ಉತ್ತಮನು' ಎಂಬುದಾಗಿ ಸ್ವಾತಂತ್ರ್ಯ ಹೋರಾಟದ ಆರಂಭದ ದಿನಗಳಲ್ಲಿ ಒಮ್ಮೆಯಲ್ಲ, ಹಲವಾರು ಬಾರಿ ಬಹಿರಂಗವಾಗಿ ಹೇಳಿಕೊಂಡಿದ್ದಾರೆ."!

"ಬಂಚ್ ಆಫ್ ಥಾಟ್ಸ್ ಪುಸ್ತಕವನ್ನು ಮಲೆಯಾಳಂಗೆ ಭಾಷಾಂತರಿಸಲಾಗಿದೆ. ವಿಚಾರಣೆಯಲ್ಲಿ ಸಾಕ್ಷಿ ನುಡಿದ ಬಿ. ಪಿ. ಅಬೂಬಕ್ಕರ್ (P8 WI) ಹೇಳುವಂತೆ ಈ ಪುಸ್ತಕವನ್ನು ತಲಚೇರಿಯಲ್ಲಿ ಬಿಟ್ಟಿಯಾಗಿ ಹಂಚಲಾಗಿತ್ತು (ಪುಟ ಹಿಂದೂ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ ಮತ್ತು ತಲಚೇರಿಯ ಓರ್ವ ಪ್ರಮುಖ ಆರೆಸ್ಸೆಸ್ ಕಾರ್ಯಕರ್ತ ಸಿ. ಚಂದ್ರಶೇಖರನ್ (P 13 W I) ಹೇಳಿಕೆಯಂತೆ ಗೋಲ್ವಾಲ್ಕರ್ ಅವರು ಈ ಸಂಸ್ಥೆಯ (ಆರೆಸ್ಸೆಸ್‌ನ) ಸಿದ್ಧಾಂತ ನಿರೂಪಕ ಮತ್ತು ಮಾರ್ಗದರ್ಶಿ." ಸುಭದ್ರಾ ಜೋಶಿ ಅವರು ಬರೆದಿರುವ 'ಕೋಮುಗಲಭೆಗಳ ಹಿಂದೆ ಆರೆಸ್ಸೆಸ್‌ನ ಕೈವಾಡವಿದೆಯೆ? ಎನ್ನುವ ಪುಸ್ತಕವನ್ನೂ ಈ ಕುರಿತು ಪ್ರಸ್ತಾಪಿಸುವುದು ಉಪಯುಕ್ತಕರ. ಕೋಮುಗಲಭೆಗಳ ವೇಳೆ ಆರೆಸ್ಸೆಸ್ ಬಳಸುವ ತಂತ್ರಗಳ ಕುರಿತು ಈ ಪುಸ್ತಕದ 8ನೇ ಪುಟದಲ್ಲಿ ಹೀಗೆ ಹೇಳಲಾಗಿದೆ.

"ಗಲಭೆಗಳನ್ನು ಉದ್ರೇಕಿಸಿ ಅವುಗಳನ್ನು ಹಬ್ಬಿಸುವ ವಿಧಾನಗಳನ್ನು ಈ ರೀತಿ ವಿಂಗಡಿಸಬಹುದು.

1. ಮುಸಲ್ಮಾನರು ದೇಶಕ್ಕೆ ನಿಷ್ಠರಾಗಿಲ್ಲವೆಂದು ಪ್ರಚಾರ ಮಾಡುವ ಮೂಲಕ ಬಹುಸಂಖ್ಯಾತ ಕೋಮಿನ ಜನರಲ್ಲಿ ಕೋಮುವಾರುಭಾವನೆಯನ್ನು ಪ್ರಚೋದಿಸುವುದು.

2. ಬಹುಸಂಖ್ಯಾತರಲ್ಲಿ ತೀವ್ರ ಭಯವನ್ನು ಸೃಷ್ಟಿಸಿ ಈ ಅಂಜಿಕೆಯ ವಾತಾವರಣದ ದುರ್ಲಾಭ ಪಡೆಯುವುದು.

3. ಆಡಳಿತ ಯಂತ್ರದಲ್ಲಿ ನುಸುಳಿಕೊಂಡು ನಾಗರಿಕ ಅಧಿಕಾರಿಗಳು, ಪೋಲೀಸ್ ಮತ್ತು ಸೈನಿಕರು ಸಹಾ ಕೋಮುವಾದಿ ವರ್ತನೆಯನ್ನು ಅನುಸರಿಸುವಂತೆ ಮಾಡುವುದು.

4. ಬಹುಸಂಖ್ಯಾತ ಕೋಮುಗಳ ಎಳೆಯರನ್ನು ಕಠಾರಿ, ಖಡ್ಗ ಮತ್ತು ಭರ್ಜಿಯಂತಹ ಆಯುಧಗಳ ಬಳಕೆಯಲ್ಲಿ ತರಬೇತುಗೊಳಿಸುವುದು.

5. ಕೋಮುವಾರು ವೈಷಮ್ಯ ಪಸರಿಸುವಂತೆ ಸುಳ್ಳು ವದಂತಿಗಳನ್ನು ಹಬ್ಬಿಸುವುದು ಮತ್ತು ಯಾವುದೇ ಘಟನೆ ಅಥವಾ ಚಲನವಲನಕ್ಕೂ ಜಾತೀಯತೆಯ ಬಣ್ಣ ನೀಡವುದು.

"ಸ್ವತಂತ್ರ ಭಾರತದಲ್ಲಿ ನಡೆದ ಎಲ್ಲಾ ಕೋಮುವಾರು ಗಲಭೆಗಳನ್ನೂ ಪರಾಮರ್ಶಿಸಿ ನೋಡಿದರೆ ಈ ಎಲ್ಲ ವಿಧಾನಗಳನ್ನು ಹೇಗೆ ಬಳಸಲಾಗುತ್ತಿದೆಯೆಂಬುದು ಸ್ಪಷ್ಟವಾಗುತ್ತದೆ. ಆರೆಸ್ಸೆಸ್ ಆರು ತಿಂಗಳಿಗೊಮ್ಮೆ ತನ್ನ ತರಬೇತಿ ಶಿಬಿರಗಳನ್ನು ನಡೆಸುತ್ತದೆ. ಆಡಳಿತಯಂತ್ರ ಮತ್ತು ಕಾನೂನು ಹಾಗೂ ಶಿಸ್ತು ಪಾಲನಾ ವ್ಯವಸ್ಥೆಗಳ ಮೇಲೂ ಆರೆಸ್ಸೆಸ್‌ನ ಪ್ರಭಾವ ವ್ಯಾಪಿಸಿದೆ. ಮುಸ್ಲಿಂ ವಿರೋಧಿ ಪ್ರಚಾರವನ್ನು ನಿರಂತರ ನಡೆಸಲಾಗುತ್ತಿದೆ."

"ಕಣ್ಣಾನೂರಿನ ಆರೆಸ್ಸೆಸ್‌ನ ಪ್ರಮುಖ ಕಾರ್ಯಕರ್ತ ಪಿ. ರಾಜಗೋಪಾಲ್ (P 68 W 1) ಒಪ್ಪಿಕೊಂಡಿರುವ ಪ್ರಕಾರ ಆರೆಸ್ಸೆಸ್‌ಗೆ ತಿರುವಂಗಾಡ್ ಮತ್ತು ತಲಚೇರಿ ನಗರಗಳಲ್ಲಿ ಶಾಖೆಗಳಿವೆ. ತಲಚೇರಿಯ ಹಿಂದೂಗಳ ಮಧ್ಯೆ ತೀವ್ರ ಮುಸ್ಲಿಂ ವಿರೋಧಿ ಭಾವನೆಗಳನ್ನು ಪ್ರಚೋದಿಸುವುದರಲ್ಲಿ ಆರೆಸ್ಸೆಸ್ ಸಕ್ರಿಯ ಪಾತ್ರ ವಹಿಸಿದೆ ಮತ್ತು ಕೋಮುಗಲಭೆಗೆ ತಕ್ಕುದಾದ ವಾತಾವರಣವನ್ನು ಅದು ಸೃಷ್ಟಿಸಿದೆಯೆನ್ನುವುದರಲ್ಲಿ ನನಗೆ ಸಂದೇಹವಿಲ್ಲ."

ಪರಿಚ್ಛೇದ 210:—"ಇದೇ ಮಾತನ್ನು ಜನಸಂಘದ ವಿಷಯದಲ್ಲೂ ಹೇಳಬಹುದು. ಆರೆಸ್ಸೆಸ್ ಮತ್ತು ಜನಸಂಘದ ನಡುವೆ ಅಧಿಕೃತ ಸಂಬಂಧ ವಿಲ್ಲದೇ ಹೋದರೂ ಆರೆಸ್ಸೆಸ್-ಜನಸಂಘದ ಸೈನಿಕವಿಭಾಗವೆಂದೂ ಜನಸಂಘವು ಆರೆಸ್ಸೆಸ್‌ನ ರಾಜಕೀಯ ವಿಭಾಗವೆಂದೂ ಸಾಮಾನ್ಯವಾಗಿ ಪರಿಗಣಿಸಲ್ಪಟ್ಟಿದೆ. ಈ ಎರಡೂ ಸಂಸ್ಥೆಗಳೂ ಒಂದೇ ಎಂಬುದಾಗಿ ಸಾಮಾನ್ಯ ಎಲ್ಲರೂ ತಿಳಿದಿದ್ದಾರೆಂಬುದನ್ನೂ ಚಂದ್ರಶೇಖರನ್ (P 13 W I) ತನ್ನ ಸಾಕ್ಷಿಯಲ್ಲಿ ಒಪ್ಪಿಕೊಂಡಿದ್ದಾರೆ. ಬಲರಾಜ ಮಧೋಕರ "ಹುತಾತ್ಮನೊಬ್ಬನ ರೂಪ ಚಿತ್ರಣ" (Portrait of a Martyr) ಓದಿದವರಿಗೆ ಆರೆಸ್ಸೆಸ್ ಮತ್ತು ಜನಸಂಘದ ನಡುವೆ ನಿಕಟ ಸಂಬಂಧವಿರುವುದು ಗೊತ್ತಾಗುತ್ತದೆ. ಸುಭದ್ರಾ ಜೋಶಿ ಅವರು ತಮ್ಮ ಮೇಲ್ಕಾಣಿಸಿದ ಪುಸ್ತಕದಲ್ಲಿ 'ಭಾರತೀಯ ಜನಸಂಘದ ರೂಪದಲ್ಲಿ ಆರೆಸ್ಸೆಸ್ ರಾಜಕೀಯ ಕ್ಷೇತ್ರಕ್ಕೂ ತನ್ನ ಚಟುವಟಿಕೆಯನ್ನು ವಿಸ್ತರಿಸಿದೆ (ಪುಟ 13) ಎಂದಿದ್ದಾರೆ. ಕುಲದೀಪ ನಯ್ಯಾರ್ ತಮ್ಮ 'ಇಂಡಿಯಾ ದಿ ಕ್ರಿಟಿಕಲ್ ಇಯರ್ಸ್' (India the Critical Years) ಎಂಬ ಪುಸ್ತಕದಲ್ಲಿ ಹೀಗೆ ಹೇಳಿದ್ದಾರೆ.

"ಜನಸಂಘದ ಸೈನಿಕ ವಿಭಾಗವಾಗಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಖಂಡಿತವಾಗಿಯೂ ಮುಸ್ಲಿಂ ವಿರೋಧಿ ಪೂರ್ವಾಗ್ರಹವನ್ನು ಹೊಂದಿದೆ. ಮುಸಲ್ಮಾನರಿಗೆ ಪ್ರತ್ಯೇಕ ರಾಷ್ಟ್ರವನ್ನು ಅಂದರೆ ಪಾಕಿಸ್ತಾನವನ್ನು ನೀಡಲಾಗಿರುವುದರಿಂದ ಮುಸಲ್ಮಾನರು ಈ ದೇಶಬಿಟ್ಟು ತೊಲಗಬೇಕೆಂದೂ ಅವರು ಮಾತಿನಲ್ಲಿ ಪ್ರಚಾರ ಮಾಡುತ್ತಿದ್ದಾರೆ. (ಪುಟ 322)

"ಕ್ರೈಗ್ ಬ್ಯಾಕ್ಸರ್ಟ್ ತನ್ನ 'ಜನಸಂಘ— ಎ ಬಯಾಗ್ರಫಿ ಆಫ್ ಎನ್ ಇಂಡಿಯನ್ ಪೊಲಿಟಿಕಲ್ ಪಾರ್ಟಿ (Jan Sangh, A Biography of an Indian Political Party) ಎಂಬ ಪುಸ್ತಕದಲ್ಲಿ ಜನಸಂಘ ಮತ್ತು ಆರೆಸ್ಸೆಸ್‌ನ ನಡುವಣ ಸಂಬಂಧದ ಬಗ್ಗೆ ಉಲ್ಲೇಖಿಸುತ್ತಾ: ಜನಸಂಘವು ಪಕ್ಷವಿಲ್ಲದ ಮುಂದಾಳುವೊಬ್ಬನ (ಅಂದರೆ ಶ್ಯಾಮಪ್ರಸಾದ ಮುಖರ್ಜಿಯವರ) ಮತ್ತು ಮುಂದಾಳುವಿಲ್ಲದ ಪಕ್ಷವೊಂದರ (ಅಂದರೆ ಆರೆಸ್ಸೆಸ್‌ನ) ಸಮ್ಮಿಲನದಿಂದ ಜನಿಸಿತು' ಎಂದಿದ್ದಾರೆ.

"ಜನಸಂಘದ ಕೇರಳ ಘಟಕವೂ ಮುಸ್ಲಿಮರ ಬಗ್ಗೆ ಆರೆಸ್ಸೆಸ್ ತಳೆದಂತಹ ನಿಲುಮೆಯನ್ನೇ ತಾನೂ ಅಂಗೀಕರಿಸಿದೆ. ಮಲಪ್ಪುರಂ ಜಿಲ್ಲೆಯ ನಿರ್ಮಾಣದ ವಿರುದ್ಧ ನಡೆಸಲಾಗುತ್ತಿದ್ದ ಚಳುವಳಿ ವಾಸ್ತವವಾಗಿ ಮುಸ್ಲಿಂಲೀಗಿನ ವಿರುದ್ಧದ ಚಳುವಳಿಯಾಗಿದ್ದು ಅದಕ್ಕೆ ಜನಸಂಘವೇ ಮುಂದಾಳುತ್ವನೀಡಿದೆ. ಈ ಸಂಬಂಧ ಜನಸಂಘದಿಂದ ಪ್ರಕಟಿಸಲಾದ ಅನೇಕ ಕರಪತ್ರಗಳನ್ನು ವಿಚಾರಣೆಯ ವೇಳೆ ದಾಖಲುಪಡಿಸಲಾಗಿದ್ದು ಅವು ಈ ಪಕ್ಷಕ್ಕೆ ಮುಸ್ಲಿಮರ ಬಗೆಗಿರುವ ದ್ವೇಷ ಅದೆಷ್ಟು ಆಳವಾಗಿದೆಯೆಂಬುದನ್ನು ತೋರಿಸಿಕೊಟ್ಟಿದೆ. ತಲಚೇರಿಯ ಪೋಲೀಸ್ ಆಡಳಿತದಲ್ಲಿ ಮುಸ್ಲಿಮರ ಆರೋಪಿತ ಹಸ್ತಕ್ಷೇಪವನ್ನು ಪ್ರತಿಭಟಿಸಿ ನಡೆಸಲಾದ ಸಭೆಗಳಲ್ಲಿ ಜನಸಂಘದ ಕಾರ್ಯಕರ್ತರು ಪ್ರಮುಖ ಪಾತ್ರ ವಹಿಸಿದ್ದಾರೆ. ತಲಚೇರಿ ಗಲಭೆಗಳಿಗೆ ಕಾರಣವಾದ ಕೋಮುವಾರು ಉದ್ರಿಕ್ತವಾತಾವರಣವನ್ನು ನಿರ್ಮಿಸುವಲ್ಲಿ ಜನಸಂಘದ ಪಾತ್ರ ಮುಖ್ಯವಾದುದು ಎನ್ನುವುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ".

ಪರಿಚ್ಛೇದ 214:— "ಮುಸ್ಲಿಂ ಲೀಗಿನ ವಿಷಯ ಹೇಳುವುದಾದರೆ ಅದು ರಾಜ್ಯದಲ್ಲಿ ತನಗಿದ್ದ ರಾಜಕೀಯ ಅಧಿಕಾರವನ್ನು ದುರುಪಯೋಗಪಡಿಸಿತ್ತು ಎಂಬುದಾಗಿ ಇತರ ರಾಜಕೀಯ ಪಕ್ಷಗಳು ಅದರ ಮೇಲೆ ಮಾಡಿರುವ ಆರೋಪವನ್ನು ಕೆಲವು ಸಂದರ್ಭಗಳ

[5ನೇ ಪುಟ ನೋಡಿ]

ಮೈಕೋ ಕಾರ್ಮಿಕರ ಹೋರಾಟಕ್ಕೆ ಬೆಂಬಲವೀಯಲು ಸಿ.ಐ.ಟಿ.ಯು. ವಿನ ಕರೆ

ಪ್ರಿಯ ಸಂಗಾತಿಗಳೇ,

ಈ ವರ್ಷದ ಪ್ರಾರಂಭದಲ್ಲಿ ನಮ್ಮ ಅಧ್ಯಕ್ಷರಾದ ಕಾಂ. ಎಸ್. ಸೂರ್ಯನಾರಾಯಣರಾಯರು ಎಂ. ಇ. ಎ. (ಮೈಕೋ ಎಂಪ್ಲಾಯೀಸ್ ಅಸೋಸಿಯೇಷನ್) ಅಧ್ಯಕ್ಷರಾಗಿ ಚುನಾಯಿತರಾದುದು ಮತ್ತು ಅದರ ತರುವಾಯ ಮದರಾಸಿನಲ್ಲಿ ಸಿ.ಐ.ಟಿ ಯು. ಅಖಿಲ ಭಾರತ ಸಮ್ಮೇಳನ ನಡೆಯುವಾಗ ಮೈಕೋ ಆಡಳಿತ ಮಂಡಳಿ ಬೀಗ ಮುದ್ರೆ ಘೋಷಿಸಿದುದು, ಮೈಕೋ ಕಾರ್ಮಿಕರ ಅಖಿಲ ಭಾರತ ಸಮಾವೇಶ, ಬೇಡಿಕೆಗಳ ದಿನಾಚರಣೆ—ಒಂಡು ದಿವಸದ ಸಾಂಕೇತಿಕ ಮುಷ್ಕರ—ಈ ಎಲ್ಲಾ ವಿಷಯಗಳೂ ಸಹ 'ಐಕ್ಯರಂಗ' ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಮೈಕೋ (ಮೋಟಾರ್ ಇಂಡಸ್ಟ್ರೀಸ್ ಕಂಪೆನಿ) ಒಂದು ಸಾಮ್ರಾಜ್ಯಶಾಹಿ ದೇಶವಾದ ಪಶ್ಚಿಮ ಜರ್ಮನಿಯ ಏಕಸ್ವಾಮ್ಯಸ್ಥ ಬಂಡವಾಳಗಾರರ ಒಡೆತನದಲ್ಲಿರುವ ಒಂದು ಬಹುರಾಷ್ಟ್ರೀಯ ಸಂಸ್ಥೆ. ಜಾಗತಿಕ ಸಾಮ್ರಾಜ್ಯಶಾಹಿಯ ಕಡುವೈರಿಯಾದ ಸಿ. ಐ. ಟಿ. ಯು. ವಿನ ಮುಖಂಡರೊಬ್ಬರು ಮೈಕೋ ಎಂಪ್ಲಾಯೀಸ್ ಅಸೋಸಿಯೇಷನ್ನಿನ ಅಧ್ಯಕ್ಷರಾದುದನ್ನು ಹೇಗೆ ತಾನೇ ಸಹಿಸಲು ಸಾಧ್ಯ? ಮೈಕೋ ಆಡಳಿತ ಮಂಡಳಿಯು ಪ್ರಚೋದನೆಯನ್ನು ಪ್ರಾರಂಭಿಸಿತು. ಈ ವರೆವಿಗೆ ಮಾಡಿದ ಪಿತೂರಿಗಳನ್ನೆಲ್ಲಾ ಮೈಕೋ ಕಾರ್ಮಿಕರು ದಿಟ್ಟತನದಿಂದ ಸೋಲಿಸಿದ್ದಾರೆ. ಎಂ.ಇ.ಎ. ಪ್ರಧಾನ ಕಾರ್ಯದರ್ಶಿ ಕಾಂ. ನೀಲಕಂಠಯ್ಯನವರ ಮನೆಯ ಮೇಲೆ, ಅನಂತರ ಕಾಂ. ಎಸ್. ಸೂರ್ಯನಾರಾಯಣರಾಯರ ಮನೆಯ ಮೇಲೆ ಗೂಂಡಾದಾಳಿಗಳಾಗಿವೆ. ನಿನ್ನೆ ಎಂ. ಇ.ಎ. ಆಫೀಸಿಗೆ ಗೂಂಡಾಗಳು ಕರಿಗಾಲುಗಳು ನುಗ್ಗಿ ಸಂಘದ ಉಪಕಾರ್ಯದರ್ಶಿ ಮತ್ತು ಇತರರನ್ನು ಹೊಡೆದು ಆಫೀಸಿನಲ್ಲಿರುವ ರೇಡಿಯೋ ಕುರ್ಚಿ, ಮೇಜು, ಇನ್ನಿತರ ವಸ್ತುಗಳನ್ನು ಧ್ವಂಸ ಮಾಡಿರುತ್ತಾರೆ. (ಈ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ)

ಮೈಕೋ ಕಾರ್ಮಿಕರು ಅನಿರ್ದಿಷ್ಟ ಕಾಲದ ಮುಷ್ಕರ ನಡೆಸಲು ಶೇ. 99.2 ಬಹುಮತದ ಮತದಾನದಿಂದ ನಿರ್ಧರಿಸಿದರು. ಅಕ್ಟೋಬರ್ 5 ರಿಂದ ಮುಷ್ಕರ ಪ್ರಾರಂಭವಾಯಿತು. ಮೈಕೋ ಕಾರ್ಮಿಕರು ಶ್ರಮಭಾರದ ವಿರುದ್ಧ, ಕೆಲಸದ ಭದ್ರತೆಗಾಗಿ, ಸುರಕ್ಷತೆಗಾಗಿ ಹೋರಾಡುತ್ತಿದ್ದಾರೆ. (ಅವರ ಬೇಡಿಕೆಗಳಿರುವ ಪಟ್ಟಿಯನ್ನು ಲಗತ್ತಿಸಿದೆ) ಬೆಂಗಳೂರಿನಲ್ಲಿರುವ ಅನೇಕ ಕಾರ್ಮಿಕ ಸಂಘಗಳು ಈ ಹೋರಾಟಕ್ಕೆ ಬೆಂಬಲ ನೀಡುತ್ತಿವೆ.

ಮೈಕೋ ಕಾರ್ಮಿಕರ ಹೋರಾಟ ಕರ್ನಾಟಕದ ಸಮಸ್ತ ಕಾರ್ಮಿಕರ ಹೋರಾಟ. ಸಿ. ಐ. ಟಿ. ಯು. ಗೆ ಸೇರಿರುವ ಎಲ್ಲಾ ಸಂಘಗಳ ಪದಾಧಿಕಾರಿಗಳು ಈ ಮುಷ್ಕರದ ಮಹತ್ವವನ್ನು ಸದಸ್ಯರಿಗೆ ಸಭೆಗಳಲ್ಲಿ ವಿವರಿಸಬೇಕು. ಮೈಕೋ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಕೊಡುವ ಆಡಳಿತ ಮಂಡಳಿಯ ಕಾರ್ಮಿಕ ವಿರೋಧಿ ಧೋರಣೆ-ಕೃತ್ಯಗಳನ್ನು, ಕಾರ್ಮಿಕ ಮುಖಂಡರ ಮತ್ತು ಸಂಘದ ಆಫೀಸಿನ ಮೇಲೆ ನಡೆಯುತ್ತಿರುವ ಗೂಂಡಾ ದಾಳಿಯನ್ನು ಖಂಡಿಸುವ, ಪರಿಣಾಮಕಾರಿಯಾಗಿ ಮಧ್ಯ ಪ್ರವೇಶ ಮಾಡಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಿ ಮುಷ್ಕರವನ್ನು ಅಂತ್ಯಗೊಳಿಸಬೇಕು, ಮೈಕೋ ಸುತ್ತಮುತ್ತ ವಿಧಿಸಿರುವ ನಿಷೇದಾಜ್ಞೆಯನ್ನು ಕೂಡಲೇ ರದ್ದು ಮಾಡಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡುವ ಗೊತ್ತುವಳಿಗಳನ್ನು ಅಂಗೀಕರಿಸಿ, ಅವುಗಳನ್ನು ಮುಖ್ಯಮಂತ್ರಿ, ಕಾರ್ಮಿಕ ಮಂತ್ರಿ, ಮೈಕೋ ಆಡಳಿತ ಮಂಡಳಿ ಎಂ. ಇ. ಎ. ಮತ್ತು ಸಿ. ಐ. ಟಿ. ಯು. ರಾಜ್ಯ ಕೇಂದ್ರಕ್ಕೆ ಕಳುಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ವಿಳಾಸಗಳು : 1. ಮೇನೇಜರ್ ಮೈಕೋ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560027. 2. ಪ್ರಧಾನ ಕಾರ್ಯದರ್ಶಿ, ಮೈಕೋ ಎಂಪ್ಲಾಯೀಸ್ ಅಸೋಸಿಯೇಷನ್, ಶ್ರಮಜೀವಿ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560027.

ಮೈಕೋ ಕಾರ್ಮಿಕರ ಹೋರಾಟದ ಬೆಂಬಲವಾಗಿ ಒಂದು ದಿವಸ ಸೌಹಾರ್ದ ದಿನವನ್ನು ಆಚರಿಸಲು ಮತ್ತು ಒಂದು ದಿವಸದ ಮುಷ್ಕರವನ್ನು ಆಚರಿಸಲು ಸಿದ್ಧತೆಗಳನ್ನು ಪ್ರಾರಂಭಿಸಬೇಕು. ಸಭೆ ಸೌಹಾರ್ದ ದಿನದ ತಾರೀಖನ್ನು ನಿಶ್ಚಯಿಸಿದ ನಂತರ ತಿಳಿಸುತ್ತೇವೆ. ಸಭೆಗಳನ್ನು ನಡೆಸಿ ಗೊತ್ತುವಳಿಗಳನ್ನು ಅಂಗೀಕರಿಸಿದ ತೀರ್ಮಾನವನ್ನು ಕಳುಹಿಸುವ ಕೆಲಸವನ್ನು ತುರ್ತಾಗಿ ಮಾಡಬೇಕು ಎಂದು ಸಿ. ಐ. ಟಿ. ಯು. ಕರ್ನಾಟಕ ರಾಜ್ಯಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಕರೆ ಇತ್ತಿರುವರು. ●

ದಾಸ್‌ಪ್ರಕಾಶ್ ಹೋಟೆಲ್ ಕಾರ್ಮಿಕರ ಹೋರಾಟದ ಮುನ್ನಡೆ

ಮೈಸೂರು ನಗರದಲ್ಲಿರುವ ದಾಸ್‌ಪ್ರಕಾಶ್ ಹೋಟೆಲ್‌ನ ಮಾಲೀಕರು ತಾ. 3-10-79 ರಿಂದ ಹೋಟೆಲಿಗೆ ಬೀಗಮುದ್ರೆ ಘೋಷಿಸಿ ಸುಮಾರು 200 ಜನ ಕೆಲಸಗಾರರನ್ನು ಹೊರಹಾಕಿರುತ್ತಾರೆ. ಇದನ್ನು ಪ್ರತಿಭಟಿಸಿ ಕೆಲಸಗಾರರು ಹೋರಾಟವನ್ನು ಮುಂದುವರಿಸುತ್ತಿದ್ದಾರೆ. ಇವತ್ತಿಗೆ 37 ದಿನಕ್ಕೆ ಕಾಲಿಟ್ಟಿರುತ್ತದೆ.ಆದಾಗ್ಯೂ ಸಹ ಮಾಲೀಕರು ಕಾರ್ಮಿಕ ಇಲಾಖೆಯ ಮುಂದೆ ಮಾತುಕತೆಗೆ ಬರಲು ನಿರಾಕರಿಸುತ್ತಿದ್ದಾರೆ. ಅಲ್ಲದೆ ಕಳೆದ ತಿಂಗಳು ದುಡಿದ ವೇತನವನ್ನು ಸಹ ಕೆಲಸಗಾರರಿಗೆ ಕೊಟ್ಟಿರುವುದಿಲ್ಲ. ಇಷ್ಟಾದರೂ ಕಾರ್ಮಿಕ ಇಲಾಖೆಯವರು ಕ್ರಮ ತೆಗೆದುಕೊಳ್ಳಲು ನಿರಾಕರಿಸುತ್ತಿದ್ದಾರೆ. ಕಾರಣ ಈ ಬೀಗ ಮುದ್ರೆಯ ಹಿಂದೆ ಕಾರ್ಮಿಕ ಅಧಿಕಾರಿಗಳ ಕೈವಾಡ ಜಾಸ್ತಿ ಆಗಿದೆ. ಇದನ್ನು ಪ್ರತಿಭಟಿಸಿ ಕಾರ್ಮಿಕರು ನಗರದ ಎಲ್ಲಾ ಕಾರ್ಮಿಕ ಸಂಘಗಳ ಒಂದು ಸೌಹಾರ್ದ ಸಮಿತಿಯನ್ನು ರಚಿಸಿ ಜಿಲ್ಲಾಧಿಕಾರಿಗಳು, ಮುಖ್ಯಮಂತ್ರಿಗಳು, ಕಾರ್ಮಿಕ ಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಿ, ಹೋಟೆಲ್ ಮುಂಭಾಗದಲ್ಲಿ ಒಂದು ದಿವಸ ಪ್ರತಿಭಟನೆಯ ಘೋಷಣೆಗಳನ್ನು ಕೂಗಿ ಒತ್ತಡ ತಂದಿರುತ್ತಾರೆ. ಆದರೆ ಮಾಲೀಕರು ಇದನ್ನೆಲ್ಲ ಗಣನೆಗೆ ತೆಗೆದುಕೊಳ್ಳದೆ ಕೆಲಸಗಾರರ ಮುಖಂಡರ ಮೇಲೆ ಸುಳ್ಳು ಅಪವಾದಗಳನ್ನು ಹೊರಿಸಿ ಪೋಲೀಸರಿಗೆ ದೂರಿತ್ತಿರುತ್ತಾರೆ ಮತ್ತು ಅವರ ಏಜೆಂಟರುಗಳು ಕೆಲಸಗಾರರಲ್ಲಿ ವಿಭಜನೆ ತರಲು ಪ್ರಯತ್ನಿಸುತ್ತಿದ್ದಾರೆ. ಕೆಲಸಗಾರರ ಮೇಲೆ ಗೂಂಡಾಗಳಿಂದ ದಾಳಿ ನಡೆಸುತ್ತಿದ್ದಾರೆ. ಇಷ್ಟೆಲ್ಲ ನಡೆದರೂ ಸರ್ಕಾರದವರು ಮಾಲೀಕರ ಮೇಲೆ ಕ್ರಮ ತೆಗೆದುಕೊಳ್ಳದೆ ಕಣ್ಣು ಮುಚ್ಚಿ ಕೂತಿರುತ್ತದೆ. ಇಷ್ಟೆಲ್ಲಾ ತೊಂದರೆಗಳಿದ್ದರೂ ಸಹ ಮಾಲೀಕರ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ಎಲ್ಲಾ ಕಾರ್ಮಿಕರು ಒಂದಾಗಿ, ಹೋರಾಟವನ್ನು ಮುಂದುವರಿಸುತ್ತಿದ್ದಾರೆ. ಅನೇಕ ಕಾರ್ಮಿಕ ಸಂಘಗಳು ಆರ್ಥಿಕ ಮತ್ತು ಸೌಹಾರ್ದ ಬೆಂಬಲವನ್ನು ನೀಡುತ್ತಿವೆ. ಎಲ್ಲಾ ಸಹಕಾರಗಳು ದೊರೆತರೂ ಸಹ ಸುಮಾರು 200 ಕ್ಕೂ ಹೆಚ್ಚು ಕೆಲಸಗಾರರ ಜೀವನ ನಡೆಸುವುದು ಕಷ್ಟಕರವಾಗಿರುವುದರಿಂದ ಹೋಟೆಲ್ ಮುಂಬಾಗದಲ್ಲಿ ಕೆಲಸಗಾರರುತಮ್ಮದೇ ಆದ ಒಂದು "ಟೀ ಸ್ಟಾಲ್" ಸುಮಾರು 16 ದಿವಸಗಳಿಂದ ನಡೆಸುತ್ತಾ ಆಹಾರ ಪದಾರ್ಥಗಳನ್ನು ಇತರೆ ಹೋಟೆಲ್‌ಗಳಿಗಿಂತ ಕಡಿಮೆ ಬೆಲೆಗೆ ಕೊಡುತ್ತ ಹೋರಾಟಕ್ಕೆ ಹೊಸ ಮಾರ್ಗವನ್ನು ನೀಡಿ ಸಾರ್ವಜನಿಕರ ಗಮನ ಮತ್ತು ಬೆಂಬಲವನ್ನು ಗಳಿಸಿಕೊಂಡು ಹೋರಾಟವನ್ನು ಮುಂದುವರಿಸುತ್ತಿದ್ದಾರೆ. ಈಗಲಾದರೂ ಸರ್ಕಾರದವರು ಮಧ್ಯ ಪ್ರವೇಶಿಸಿ ಬೀಗಮುದ್ರೆಯನ್ನು ತೆಗೆಯಿಸಿ, ವಜಾಮಾಡಿದ ಕೆಲಸಗಾರರನ್ನು ಹಿಂತೆಗೆದುಕೊಂಡು, ಎಲ್ಲಾ ಕಾರ್ಮಿಕರಿಗೂ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಕಾರ್ಮಿಕ ಸಂಘ ಒತ್ತಾಯಪಡಿಸಿದೆ. ●

ಕೋಮು ಗಲಭೆಗಳಲ್ಲಿ ಆರೆಸ್ಸೆಸ್ ಪಾತ್ರವಿಲ್ಲವೆ?

[4ನೇ ಪುಟದಿಂದ]

ಲ್ಲಾದರೂ ಲೀಗ್ ಅನುಸರಿಸಿದ್ದ ವರ್ತನೆಗಳು ಸಮರ್ಥಿಸುವಂತಿದೆ ಎನ್ನುವುದನ್ನು ನಾನು ಮೊದಲೇ ಹೇಳಿದ್ದೇನೆ. ಗಲಭೆಗಳಿಗೆ ಕಾರಣವಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ ಹೊಣೆಗಾರಿಕೆಯಿಂದ ಲೀಗ್ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ."

ಪರಿಚ್ಛೇದ 220:— "ಮಾರ್ಕ್ಸಿಸ್ಟರು ಪ್ರಬಲವಾಗಿರುವ ಉಮ್ಮಂಚಿರದಲ್ಲಿ ಮುಸ್ಲಿಮರ ಮೇಲೆ ಆಕ್ರಮಣ ಮಾಡಲು ಬಂದ ಹೊರಗಿನ ಜನರನ್ನು ಮಾರ್ಕ್ಸಿಸ್ಟ್‌ಪಕ್ಷ ಮತ್ತು ಸಿ. ಪಿ. ಐ.ಗೆ ಸೇರಿದ ಬೀಡಿಕಾರ್ಮಿಕರು ತಡೆದು ನಿಲ್ಲಿಸಿದರೆಂಬುದು (P 29 W 3) ವೇಲಾಯುಧನ್ ನಂಬಿಯಾರರಸಾಕ್ಷ್ಯದಿಂದ ತಿಳಿದುಬರುತ್ತದೆ. ಆಕ್ರಮಣಕ್ಕೆ ತುತ್ತಾದ ಮುಸ್ಲಿಮರಿಗೆ ಮಾರ್ಕ್ಸಿಸ್ಟ್ ಮುಂದಾಳುಗಳುಸಹಾಯ ನೀಡಿದುದೂ ಇದೆ. ಮಾರ್ಕ್ಸಿಸ್ಟ್ ಪಾರ್ಟಿಗೆ ಸೇರಿದ ಅಥವಾಮಾರ್ಕ್ಸಿಸ್ಟ್ ಪಕ್ಷದ ಕಡೆಗೆ ಸಹಾನುಭೂತಿಯುಳ್ಳ ಮುಸ್ಲಿಮರ ಮನೆಗಳು ಕೆಲವೆಡೆ ಧಾಳಿಗೊಳಗಾಗಿವೆ. ತಿರುವಂಗಾಡಿನ ಓರ್ವ ಪ್ರಮುಖ ಮುಸ್ಲಿಂ ಮಾರ್ಕ್ಸಿಸ್ಟ್ ಮುಂದಾಳುವಿನ ಮನೆಯ ಮೇಲೆ ಆಕ್ರಮಣ ನಡೆಸಲಾಗಿಲ್ಲ. ಆದರೆ ಆಸುಪಾಸಿನ ಮಾರ್ಕ್ಸಿಸ್ಟರಲ್ಲದ ಮುಸ್ಲಿಮರ ಮನೆಗಳು ಆಕ್ರಮಣಕ್ಕೆ ಗುರಿಯಾಗಿವೆಯೆಂಬುದು ಶ್ರೀ ರಾಮದಾಸ್ (P 1 W 1) ಸಾಕ್ಷ್ಯದಿಂದ ತಿಳಿದುಬರುತ್ತದೆ. ಮಾರ್ಕ್ಸಿಸ್ಟ್ ಪಕ್ಷದ ಮುಖಂಡರು ಈ ಕೋಮು ಗಲಭೆಗಳಲ್ಲಿ ಭಾಗವಹಿಸಿಲ್ಲವೆಂಬುದು ಪ್ರಶ್ನಾತೀತ. ಮಾರ್ಕ್ಸಿಸ್ಟ್ ಕಾರ್ಯಕರ್ತರು ತಾ. 29 ರಂದು ಸಂಜೆ ಕಾರಿನಲ್ಲಿ ತಮ್ಮ ಧ್ವಜವನ್ನೇರಿಸಿಕೊಂಡು ಗಲಭೆ ಪೀಡಿತ ಪ್ರದೇಶಗಳಲ್ಲಿ ಸುತ್ತಾಡಿ ದೊಂಬಿಯನ್ನು ನಿಲ್ಲಿಸುವಂತೆ ಜನರನ್ನು ಕೇಳಿಕೊಳ್ಳುತ್ತಿದ್ದರೆಂದೂ ಸಾಕ್ಷಿಗಳು ನುಡಿದಿದ್ದಾರೆ.

ಪರಿಚ್ಛೇದ 221:— "ಗಲಭೆಗೊಳಗಾದ ಪ್ರದೇಶದಲ್ಲಿ ಜನಸಂಘ ಅಥವಾ ಆರೆಸ್ಸೆಸ್ ಸಂಖ್ಯಾದೃಷ್ಟಿಯಿಂದ ತುಂಬಾ ಪ್ರಬಲರಾಗಿಲ್ಲದಿದ್ದರೂ ಗಲಭೆಯ ಮೂರನೇ ಹಂತದಲ್ಲಿ ಅವರು ಅಧಿಕ ಸಂಖ್ಯೆಯಲ್ಲಿ ಪಾಲುಗೊಂಡಿದ್ದರೆಂಬುದೂ ರುಜುವಾತಾಗಿದೆ. ಹೆಚ್ಚಿನ ಸಾಕ್ಷಿಗಳು ಈ ಬಗ್ಗೆ ಸಾಕ್ಷಿ ನುಡಿದಿದ್ದಾರೆ. ತಲಚೇರಿ ಬಾರ್‌ನ ಪ್ರಮುಖ ಸದಸ್ಯರಾದ ಮತ್ತು ತಿರುವಂಗಾಡಿನ ನಿವಾಸಿಯಾಗಿರುವ ಶ್ರೀ ರಾಮದಾಸ್ (P 1 W 1) ತನಗೆ ಗೊತ್ತಿರುವ ಕೆಲವು ಆರೆಸ್ಸೆಸ್ ಕಾರ್ಯಕರ್ತರು ತಿರುವಂಗಾಡಿನ ಮುಸ್ಲಿಂ ಮನೆಗಳ ಮೇಲೆ ನಡೆಸಿದ ಧಾಳಿಯಲ್ಲಿ ಪಾಲುಗೊಂಡಿದ್ದಾರೆಂದೂ ತಿಳಿಸಿದ್ದಾರೆ."

ಪರಿಚ್ಛೇದ 249:— "ತಲಚೇರಿಯಲ್ಲಿ ಹಿಂದೂಗಳೂ ಮುಸ್ಲಿಮರೂ ಶತಮಾನಗಳಿಂದ ಅಣ್ಣತಮ್ಮಂದಿರಂತೆ ಜೀವಿಸಿದ್ದರು. ತಲಚೇರಿಯಲ್ಲಿ ಈ ಎರಡು ಕೋಮುಗಳ ನಡುವೆ ಇದ್ದ ಮಧುರ ಬಾಂಧವ್ಯವನ್ನು ಮೋಪ್ಲಾ ದಂಗೆಯೂ ಕೆಡಿಸಿರಲಿಲ್ಲ. ಆರೆಸ್ಸೆಸ್ ಮತ್ತು ಜನಸಂಘಗಳು ಈ ಪ್ರದೇಶದಲ್ಲಿ ತಮ್ಮ ಘಟಕಗಳನ್ನು ಸ್ಥಾಪಿಸಿ ಚಟುವಟಿಕೆಯನ್ನು ಪ್ರಾರಂಭಿಸಿದ ಮೇಲಷ್ಟೇ ಈ ಪರಿಸ್ಥಿತಿ ಬದಲಾಯಿತು. ಇವರ ಮುಸ್ಲಿಂ ವಿರೋಧಿ ಪ್ರಚಾರ, ಮುಸ್ಲಿಮರ ಮೇಲೆ ಅದು ಉಂಟುಮಾಡಿದ ಪರಿಣಾಮ, ತತ್ಫಲವಾಗಿ ಮುಸ್ಲಿಮರು ತಮ್ಮ ಸಂರಕ್ಷಣೆಗಾಗಿ ಮುಸ್ಲಿಂಲೀಗಿನ ಆಶ್ರಯ ಪಡೆದುದು ಮತ್ತು ಇವುಗಳೆಲ್ಲದರಿಂದಾಗಿ ಉದ್ಭವಿಸಿದ ಉದ್ರಿಕ್ತ ಕೋಮುವಾರು ವಾತಾವರಣ ಇವೇ ಇಲ್ಲಿ ಸಂಭವಿಸಿದ ಕೋಮುವಾರು ಗಲಭೆಗಳ ಹಿನ್ನೆಲೆ. ಮುಸಲ್ಮಾನರು ತಮ್ಮ ಪ್ರತ್ಯೇಕತಾ ಭಾವನೆಯನ್ನು ತ್ಯಜಿಸಿ ಭಾರತೀಯ ರಾಷ್ಟ್ರಜೀವನದ ಮುಖ್ಯವಾಹಿನಿಯಲ್ಲಿ ಒಂದಾಗುವವರೆಗೆ ಈ ದೇಶದಲ್ಲಿ ಕೋಮುವಾರು ಸೌಹಾರ್ದ ಇರಲು ಸಾಧ್ಯವಿಲ್ಲವೆಂದು ಆರೆಸ್ಸೆಸ್ ಹೇಳುತ್ತಿದೆ. ಕೋಮು ಗಲಭೆಗಳ ಪರಿಹಾರಕ್ಕೆ ಗುರೂಜಿ ಗೋಲ್ವಾಲ್ಕರ್ ಬಳಿ ಅತಿ ಸರಳವಾದ ಸೂತ್ರವೊಂದಿದೆಯೆನ್ನಲಾಗಿದೆ. ಅವರ ಪ್ರಕಾರ "ಮುಸಲ್ಮಾನರು ಶ್ರೀರಾಮನನ್ನು ತಮ್ಮ 'ನಾಯಕ' ಎಂಬುದಾಗಿ ಪರಿಗಣಿಸಲಿ- ಆಗ ಕೋಮುವಾರು ಸಮಸ್ಯೆ ಬಗೆಹರಿಯುತ್ತದೆ (ಆರ್ಗನೈಸರ್, ಜೂನ್ 20; 1971) ಕುಞ್ಞಂಮದ್ (P 58 W 1) ಎಂಬ ಸಾಕ್ಷಿದಾರನ ಮನೆಗೆ ಧಾಳಿಮಾಡಿದ ಆಕ್ರಮಣಕಾರರು ಅವನಿಗೆ ಹೇಳಿದುದು ಇದನ್ನೇ. "ನಿನ್ನ ಜೀವ ಉಳಿಯಬೇಕಾದರೆ ನೀನು ರಾಮ ರಾಮ ಎಂದು ಜೇವಿಸುತ್ತಾ ಈ ಮನೆಗೆ ಮೂರುಸುತ್ತು ಬರಬೇಕು" ಎಂದಿದ್ದಾರೆ. ಕುಞ್ಞಂಮದ್ ಹಾಗೇ ಮಾಡಿದ. ಆದರೆ ಭಾರತದಲ್ಲಿರುವ 70 ಮಿಲಿಯ ಮುಸಲ್ಮಾನರು ಈ ದೇಶದಲ್ಲಿ ಕೋಮುವಾರು ಸೌಹಾರ್ದತೆಯನ್ನು ಉಳಿಸಿಕೊಳ್ಳುವ ಸಲುವಾಗಿ ಹೀಗೆ ಮಾಡಬೇಕೆಂದು ಯಾರೂ ನಿರೀಕ್ಷಿಸಲು ಸಾಧ್ಯವಿಲ್ಲ. ಇಂತಹ ವರ್ತನೆ ಮುಸಲ್ಮಾನರು ತಮ್ಮ ಸಂರಕ್ಷಣೆಗಾಗಿ ತಮ್ಮದೇ ಜಾತೀಯವಾದಿ ಸಂಘಟನೆ ಸೇರಿಕೊಳ್ಳುವಂತೆ ಅವರನ್ನು ಬಲವಂತ ಮಾಡಿಸುವುದರ ಹೊರತು ಇನ್ನೇನನ್ನೂ ಸಾಧಿಸಲಾರದು." ○

ಸಮೀರವಾಡಿ ಕಾರ್ಮಿಕರಿಗೆ ಬೆಂಬಲ

ಸಮೀರವಾಡಿ ಸೋಮಯ್ಯ ಸಕ್ಕರೆ ಕಾರಖಾನೆಯ ಕಾರ್ಮಿಕರು ತಮ್ಮ ನ್ಯಾಯವಾದ ಬೇಡಿಕೆಗಳಿಗಾಗಿ ಹಲವು ದಿವಸಗಳಿಂದ ನಡೆಸುತ್ತಲಿರುವ ಹೋರಾಟಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯ ವಿಸ್ತೃತ ಸಭೆಯು ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿ, ಮಧ್ಯಪ್ರವೇಶ ಮಾಡಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವಂತೆ ಸರಕಾರವನ್ನು ಒತ್ತಾಯಿಸಿದೆ. ○

ಆರ್ಥಿಕ ಸಮೀಕ್ಷೆ :

[3ನೇ ಪುಟದಿಂದ]

ಬೆಲೆಗಳನ್ನು ಕೊಡದೆ, ನ್ಯಾಯ ಬೆಲೆಗಳನ್ನಷ್ಟೇ ಕೊಡಲು ಒತ್ತಾಯಿಸಬೇಕು. ಪಕ್ಷದ ಎಲ್ಲಾ ವಿದೇಶಿ ಸಾಲಗಳನ್ನು ಬರಕಾಸ್ತುಗೊಳಿಸಬೇಕು. ವಿದೇಶಿ ವ್ಯಾಪಾರವನ್ನು ರಾಷ್ಟ್ರೀಕರಿಸಬೇಕು.

೨. ಗುತ್ತೇದಾರಿ ಬಂಡವಾಳ :

ಇಪ್ಪತ್ತು ಅತಿ ದೊಡ್ಡ ಗುತ್ತೇದಾರಿ ಕೈಗಾರಿಕಾ ಕುಟುಂಬಗಳ ಆಸ್ತಿ ಮೌಲ್ಯ
(ರೂ. ಕೋಟಿಗಳಲ್ಲಿ)

ಗುತ್ತೇದಾರಿ ಕುಟುಂಬಗಳು	1972ರಲ್ಲಿ ಆಸ್ತಿಮೌಲ್ಯ	1977ರಲ್ಲಿ ಆಸ್ತಿಮೌಲ್ಯ	ಶೇಕಡಾ ಹೆಚ್ಚುವರಿ
1. ಬಿರ್ಲಾ	589.40	1070.20	81.6
2. ಟಾಟಾ	641.93	1069 28	66.6
3. ಮಫತ್‌ಲಾಲ್	183 74	285.63	55.4
4. ಜೆ. ಕೆ.	121.45	267.31	120.1
5. ಥಾಪರ್	136.16	215 92	58.6
6. ಐ. ಸಿ. ಐ.	135.21	209.97	55.3
7. ಸಿಂಧಿಯಾ	107.73	200.04	85.7
8. ಆಯಿಲ್ ಇಂಡಿಯಾ	104.04	199.95	92.2
9. ಭಿವರಡಿವಾಲಾ	45.91	189.44	312.6
10. ಬಂಗೂರ್	125.26	188.24	50.3
11. ಲಾರ್ಸನ್ & ಟಾಬ್ರೊ	79.03	185 91	135.3
12. ಶ್ರೀರಾಮ್	120.77	179 77	48.9
13. ಎ. ಸಿ. ಸಿ.	134.36	168.86	25.7
14. ಕಿರ್ಲೋಸ್ಕರ್	86.46	160.96	86.2
15. ಹಿಂದುಸ್ಥಾನ್ ಲಿವರ್	77.87	143.59	84.4
16. ಖಟಾವ್ (ಬೊಂಬಾಯಿ)	75.44	138.82	84.0
17. ಸಾರಾಭಾಯ್	84.44	136.96	62.3
18. ವಾಲ್ ಚಂದ್	99.47	132.81	33.5
19. ಮೆಕ್‌ನೀಲ್&ಮಾಗೋರ್	64.80	132.55	104.5
20. ಮಹೀಂದ್ರ&ಮಹೀಂದ್ರ	58.49	125.49	114.5
ಒಟ್ಟು	3071.98	5401.70	75.8

ಆಧಾರ : ಕಂಪೆನಿ ವ್ಯವಹಾರಗಳ ಖಾತೆಯ ಪ್ರಕಟಣೆ. ಫಿನಾನ್ಸಿಯಲ್ ಎಕ್ಸ್‌ಪ್ರೆಸ್ : 22-9-79.

ಸ್ವಾತಂತ್ರ್ಯ ದೊರೆತಾಗ ಟಾಟಾ ಮತ್ತು ಬಿರ್ಲಾ ಕುಟುಂಬಗಳ ಕೈಗಾರಿಕಾ ಆಸ್ತಿ ಮೌಲ್ಯಗಳು ಅನುಕ್ರಮವಾಗಿ ರೂ. 95 ಕೋಟಿ ಮತ್ತು ರೂ. 51 ಕೋಟಿಗಳಾಗಿದ್ದವು. 1977 ರಲ್ಲಿ ಅವರ ಆಸ್ತಿ ಮೌಲ್ಯಗಳು ಅನುಕ್ರಮವಾಗಿ ರೂ. 1069.28 ಕೋಟಿ ಮತ್ತು ರೂ. 1070.20 ಕೋಟಿಗಳಿಗೇರಿದವು. 1972 ರಿಂದ 1977 ರ ಅವಧಿಯಲ್ಲಿ ಈ ಎರಡು ಕುಟುಂಬಗಳ ಆಸ್ತಿ ಮೌಲ್ಯಗಳು ಅನುಕ್ರಮವಾಗಿ ಶೇ. 66.6 ಮತ್ತು ಶೇ. 81.6 ರಷ್ಟು ಹೆಚ್ಚಿದವು. 1972-73 ರಿಂದ ಬಿರ್ಲಾ ಕುಟುಂಬವು ಎರಡನೇ ಸ್ಥಾನದಿಂದ ಒಂದನೇ ಸ್ಥಾನಕ್ಕೇರಿ, ಟಾಟಾ ಕುಟುಂಬವನ್ನು ಒಂದನೇ ಸ್ಥಾನದಿಂದ ಎರಡನೇ ಸ್ಥಾನಕ್ಕಿಳಿಸಿತು. ಮಫತ್‌ಲಾಲ್ ಕುಟುಂಬವು 1963-64 ರಲ್ಲಿ 10ನೇ ಸ್ಥಾನದಲ್ಲಿ, 1966-67 ರಿಂದ ಮೂರನೇ ಸ್ಥಾನವನ್ನು ಕ್ರಮಿಸಿದೆ. ಇತರ ಅನೇಕ ಕುಟುಂಬಗಳೂ ಈ ಅವಧಿಯಲ್ಲಿ ತಮ್ಮ ಸ್ಥಾನಗಳಲ್ಲಿ ಗಣನೀಯವಾದ ಪ್ರಗತಿಯನ್ನು ಸಾಧಿಸಿವೆ. 1972ರಲ್ಲಿ ರೂ. 100 ಕೋಟಿಗಿಂತ ಹೆಚ್ಚು ಆಸ್ತಿ ಮೌಲ್ಯವಿರುವ ಗುತ್ತೇದಾರಿ ಕುಟುಂಬಗಳ ಸಂಖ್ಯೆ 11 ಆಗಿದ್ದರೆ, 1976 ರಷ್ಟರಲ್ಲಿ ಅವುಗಳ ಸಂಖ್ಯೆ 20 ಕ್ಕೇರಿ, ಈಗ 25ಕ್ಕೂ ಮೀರಿದೆ!

1972-77 ರ ಅವಧಿಯಲ್ಲಿ, ಇಂದಿರಾಗಾಂಧಿಯ 'ಗರೀಬಿ ಹಟಾವೊ' ರಾಜ್ಯಭಾರದ ಉಚ್ಛ್ರಾಯ ಕಾಲದಲ್ಲಿ, ದೇಶದ ಅತಿ ದೊಡ್ಡ 20 ಗುತ್ತೇದಾರಿ ಕುಟುಂಬಗಳ ಆಸ್ತಿ ಮೌಲ್ಯವು ರೂ. 3072 ಕೋಟಿಯಿಂದ ರೂ. 5402 ಕೋಟಿಗೇರಿತು, ಶೇ. 76 ರಷ್ಟು ಹೆಚ್ಚಾಯಿತು. ಇದೇ ಸಮಯದಲ್ಲಿ ಹಣದುಬ್ಬರದಿಂದಾಗಿ ಈ ಆಸ್ತಿಗಳ ಮಾರುಕಟ್ಟೆಯ ಮೌಲ್ಯವು ಹೆಚ್ಚಾಗಿದ್ದು, ನಿಜವಾಗಿ ಅವುಗಳ ಒಟ್ಟು ಮೌಲ್ಯವು 5 ವರುಷಗಳಲ್ಲಿ ಶೇ. 109 ರಷ್ಟು ಹೆಚ್ಚಾಗಿದೆ ಎಂದು ಅಂದಾಜು ಮಾಡಲಾಗಿದೆ. 1972-73 ರಿಂದ 1975-76ರ ಅವಧಿಯಲ್ಲಿ ರೂ. 20 ಕೋಟಿಗಿಂತಲೂ ಹೆಚ್ಚು ಆಸ್ತಿ ಮೌಲ್ಯವಿರುವ ಒಟ್ಟು 81 ಗುತ್ತೇದಾರಿ ಕೈಗಾರಿಕೆಗಳು ಸುಮಾರು 1000 ಕಂಪೆನಿಗಳನ್ನು ಹೊಂದಿದ್ದು, ಅವುಗಳ ಆಸ್ತಿ ಮೌಲ್ಯವು ರೂ. 5597 ಕೋಟಿಯಿಂದ ರೂ. 8990 ಕೋಟಿಗೇರಿತು. ಅಂದರೆ ಶೇ. 60.6 ರಷ್ಟು ಏರಿತು. ಇದೇ ಅವಧಿಯಲ್ಲಿ ಒಟ್ಟು ಖಾಸಗೀ ಕ್ಷೇತ್ರದ ಸುಮಾರು 25,000 ಕಂಪೆನಿಗಳ ಮೌಲ್ಯವು ರೂ. 11,829 ಕೋಟಿಯಿಂದ ರೂ. 17,251ಕೋಟಿಗೇರಿತು. ಅಂದರೆ ಶೇ. 45.8ರಷ್ಟು ಹೆಚ್ಚಿತು. ಗುತ್ತೇದಾರಿ ಕುಟುಂಬಗಳಲ್ಲಿ ಅದರಲ್ಲೂ 20 ದೊಡ್ಡ ಕುಟುಂಬಗಳಲ್ಲಿ, 10 ಅತಿ ದೊಡ್ಡ ಕುಟುಂಬಗಳಲ್ಲಿ, ಟಾಟಾ, ಬಿರ್ಲಾರ ಎರಡೇ ಕುಟುಂಬಗಳಲ್ಲಿ ಹೆಚ್ಚು ಹೆಚ್ಚು ವೇಗವಾಗಿ ಕೈಗಾರಿಕಾ ಕೇಂದ್ರೀಕರಣವು ನಡೆಯುತ್ತಿದೆ. 1972 – 73 ರಲ್ಲಿ ಖಾಸಗೀ ಕೈಗಾರಿಕಾ ಸಂಸ್ಥೆಗಳ ಒಟ್ಟು ಆಸ್ತಿ ಮೌಲ್ಯದಲ್ಲಿ ಗುತ್ತೇದಾರಿ ಕುಟುಂಬಗಳ ಪಾಲು ಶೇ. 47.6 ಆಗಿದ್ದರೆ, 1975-76ರಲ್ಲಿ ಅವುಗಳ ಪಾಲು ಶೇ. 52.1ಕ್ಕೇರಿತು. ಅದೇ ರೀತಿಯಲ್ಲಿ ಅವುಗಳ ವ್ಯವಹಾರಗಳೂ ಲಾಭಗಳೂ ಹೆಚ್ಚುತ್ತಲೇ ಇವೆ. 1976ರಲ್ಲಿ ಸಾರ್ವಜನಿಕ ರಂಗದ ಕೈಗಾರಿಕಾ ಸಂಸ್ಥೆಗಳ ಒಟ್ಟು ರೂ. 13045 ಕೋಟಿ ಆಸ್ತಿ ಮೌಲ್ಯವು ರೂ. 265 ಕೋಟಿ ಲಾಭಗಳಿಸಿದ್ದರೆ, ಖಾಸಗೀ ಕ್ಷೇತ್ರದ 25 ದೊಡ್ಡ ಗುತ್ತೇದಾರಿ ಕುಟುಂಬಗಳ ಒಟ್ಟು ರೂ. 5476 ಕೋಟಿ ಆಸ್ತಿ ಮೌಲ್ಯವು ರೂ. 455 ಕೋಟಿ ಲಾಭಗಳಿಸಿವೆ, ಅಂದರೆ ಶೇ. 80ರಷ್ಟು ಹೆಚ್ಚು ಲಾಭಗಳಿಸಿವೆ!

ಖಾಸಗೀ ಕೈಗಾರಿಕಾ ಕ್ಷೇತ್ರದಲ್ಲಿ ಗುತ್ತೇದಾರಿ ಕುಟುಂಬಗಳಲ್ಲಿ ಆಸ್ತಿ ಮೌಲ್ಯ ಕೇಂದ್ರೀಕೃತವಾಗಿರುವುದರಿಂದ ಅತಿ ಲಾಭಗಳಿಸಲು ತೀವ್ರ ಪೈಪೋಟಿ ನಡೆಯುತ್ತಿದೆ. ಪೈಪೋಟಿಯಿಂದ ಸಣ್ಣ ಹಾಗೂ ಮಧ್ಯಮ ದರ್ಜೆಯ ಕೈಗಾರಿಕಾ ಸಂಸ್ಥೆಗಳು ದಿವಾಳಿಯಾಗುತ್ತಿವೆ. ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಖಾಸಗೀ ಕ್ಷೇತ್ರದಲ್ಲಿ ಉದ್ಯೋಗಾವಕಾಶವು 67-68 ಲಕ್ಷಗಳಲ್ಲಿಯೇ ಒಂದು ದಶಕದಿಂದ ಸ್ಥಗಿತಗೊಂಡಿದೆ. ಸಾರ್ವಜನಿಕ ಕ್ಷೇತ್ರದ ಕೈಗಾರಿಕಾ ಅಭಿವೃದ್ಧಿಯಿಂದ ಅವಶ್ಯಕ ಯಂತ್ರೋಪಕರಣಗಳು, ಮೂಲಭೂತ ವಸ್ತುಗಳು ಖಾಸಗೀ ಕ್ಷೇತ್ರದ ಕೈಗಾರಿಕೆಗಳಿಗೆ ಅಗ್ಗದ ಬೆಲೆಗಳಲ್ಲಿ ದೊರೆತು, ಗುತ್ತೇದಾರಿ ಕುಟುಂಬಗಳ ಲಾಭ ಇನ್ನಷ್ಟೂ ಹೆಚ್ಚುತ್ತಿದೆ. ಸಾರ್ವಜನಿಕ ಕ್ಷೇತ್ರದ ನಷ್ಟವೇ ಖಾಸಗೀ ಕ್ಷೇತ್ರದ ಲಾಭ! ಸಾರ್ವಜನಿಕ ಕೈಗಾರಿಕಾ ಕ್ಷೇತ್ರವು ಸಾಕಷ್ಟು ವಿಸ್ತರಿಸಿರುವುದಾದರೂ, ಇಂದಿಗೂ ದೇಶದ ಶೇ. 80ರಷ್ಟು ಉತ್ಪಾದನೆ ಖಾಸಗೀ ಕ್ಷೇತ್ರದ ಅಧೀನದಲ್ಲಿಯೇ ಇದೆ! ಸಾರ್ವಜನಿಕ ಕ್ಷೇತ್ರವನ್ನು ವಿಸ್ತರಿಸಲು ಸರಕಾರಕ್ಕೆ ಸಾಕಷ್ಟು ಸಂಪನ್ಮೂಲಗಳು ಸಿಗುತ್ತಿಲ್ಲ. ಖಾಸಗೀ ಕ್ಷೇತ್ರದ ಅತಿ ಲಾಭದಿಂದ ಸಂಪನ್ಮೂಲಗಳು ತುಂಬಿತುಳುಕುತ್ತಿದ್ದರೂ, ಕೈಗಾರಿಕಾ ಅಭಿವೃದ್ಧಿಗಾಗಿ ಅವುಗಳನ್ನು ವಿನಿಯೋಗಿಸಲಾಗುತ್ತಿಲ್ಲ. ತಮ್ಮ ವಿಸ್ತರಣೆ ವ್ಯವಹಾರಗಳಿಗೆ ಹೆಚ್ಚಾಗಿ ರಾಷ್ಟ್ರೀಕೃತ ಬ್ಯಾಂಕುಗಳನ್ನೇ ಅವಲಂಭಿಸುತ್ತಿವೆ. ತಮ್ಮ ಸಂಪನ್ಮೂಲಗಳನ್ನು ಸುಖಭೋಗ ವಸ್ತುಗಳ ಉತ್ಪಾದನೆಗೆ ಹಾಗೂ ಬಳಕೆಗೆ, ಪ್ರತಿಸ್ಪರ್ಧಿಗಳನ್ನು ಸೋಲಿಸಲಿಕ್ಕೆ ಮತ್ತು ರಾಜಕೀಯ ವರ್ಚಸ್ಸು ಬೆಳೆಸಿಕೊಳ್ಳಲಿಕ್ಕೆ ಉಪಯೋಗಿಸುತ್ತಿವೆ.

ಖಾಸಗೀ ಕ್ಷೇತ್ರದಲ್ಲಿ ಉಂಟಾದ ಅಧಿಕ ಮೌಲ್ಯ (Surplus Value) ದಲ್ಲಿ ಬಂಡವಾಳಗಾರರ ಪಾಲು ಹೆಚ್ಚುತ್ತಿದೆ. ಕಾರ್ಮಿಕರ ಪಾಲು ಕಡಿಮೆಯಾಗುತ್ತಿದೆ. ಹೊಸ ಉದ್ಯೋಗಾವಕಾಶಗಳು ಸ್ಥಗಿತಗೊಂಡು, ಸಣ್ಣ ಮತ್ತು ಮಧ್ಯಮ ಮಟ್ಟದ ಕೈಗಾರಿಕಾ ಸಂಸ್ಥೆಗಳು ದಿವಾಳಿಗೊಂಡು, ಸಾವಿರಾರು ಕಾರ್ಮಿಕರು ಕೆಲಸಕಳೆದುಕೊಂಡು, ಕಾರ್ಮಿಕರ ಕೂಲಿ ಮತ್ತು ಜೀವನ ಮಟ್ಟ ಇಳಿಮುಖಗೊಂಡು ಉತ್ಪಾದಿತ ವಸ್ತುಗಳಿಗೆ ಆಂತರಿಕ ಮಾರುಕಟ್ಟೆ ಕ್ಷಯಿಸುತ್ತಿದೆ. ಕೈಗಾರಿಕಾ ಅಭಿವೃದ್ಧಿಯು ಸ್ಥಗಿತಗೊಳ್ಳುತ್ತಿದೆ. ಬೆಲೆಗಳು ಏರುತ್ತಿವೆ. ವಿದೇಶಿ ಮಾರುಕಟ್ಟೆಯಲ್ಲಿ ಕೈಗಾರಿಕಾ ಸಾಮುಗ್ರಿಗಳನ್ನು ಮಾರಿ ಲಾಭ ಗಿಟ್ಟಿಸಲು ಸರಕಾರವು ಹೇರಳ ಸಹಾಯಧನ ನೀಡುವುದರಿಂದ ಮತ್ತು ವಿದೇಶಿ ಸಹೋದ್ಯೋಗಿಗಳಿಂದ ಆರ್ಥಿಕ ಪ್ರಗತಿ ಸಂಪನ್ಮೂಲಗಳ ಕೊರತೆಯಿಂದ ಇನ್ನಷ್ಟು ಸ್ಥಗಿತಗೊಳ್ಳುತ್ತಿದೆ. ವಿದೇಶಿ ಅವಲಂಬನೆ ಹೆಚ್ಚುತ್ತಿದೆ. ಸ್ವಾವಲಂಬನೆಯ ಗುರಿ ದೂರ ಉಳಿಯುತ್ತಿದೆ. ಈ ವಿಷವರ್ತುಲದಿಂದ ತಪ್ಪಿಸಿಕೊಳ್ಳಲು, ಯೋಜನಾಬದ್ಧವಾಗಿ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಬೆಲೆ ಏರಿಕೆಯನ್ನು ತಡೆಯಲು, ನಿರುದ್ಯೋಗ ನಿವಾರಿಸಲು ಖಾಸಗೀ ಕ್ಷೇತ್ರದ ಗುತ್ತೇದಾರಿ ಕೈಗಾರಿಕೆ ಹಾಗೂ ವ್ಯಾಪಾರ ಸಂಸ್ಥೆಗಳನ್ನಾದರೂ ರಾಷ್ಟ್ರೀಕರಿಸಬೇಕು.

೩. ಭೂಮಾಲಕ ಪದ್ಧತಿ:

1970-71ರಲ್ಲಿ ವ್ಯವಸಾಯ ಭೂಹಿಡುವಳಿಗಳ ವಿತರಣೆ :

ಹಿಡುವಳಿಯ ಗಾತ್ರ	ಹಿಡುವಳಿಗಳ ಸಂಖ್ಯೆ (1000 ಗಳು)	ಶೇ.	ವಿಸ್ತೀರ್ಣ 10000ಎಕರೆಗಳಲ್ಲಿ	ಶೇ.
10 ಎಕರೆಗಳಿಗಿಂತ ಕಡಿಮೆ	35682	50.6	14545	9.0
10 ಎಕರೆಗಳಿಂದ 20 ಎಕರೆಗಳು	13432	19.0	19282	11.9
20 ಎಕರೆಗಳಿಂದ 40 ಎಕರೆಗಳು	10681	15.2	29999	18.5
10 ಎಕರೆಗಳಿಂದ 40 ಎಕರೆಗಳು	24113	34 2	49281	30.4
40 ಎಕರೆಗಳಿಂದ 100ಎಕರೆಗಳು	7932	11.3	48234	29.7
100 ಎಕರೆಗಳಿಗಿಂತ ಹೆಚ್ಚು	2766	3.9	50064	30.9
ಒಟ್ಟು	70493	100	162124	100.0

ಸಾಧಾರ : ಕೃಷಿ ಗಣನೆಯ ವರದಿ, 1975

ಮೇಲಿನ ಅಂಕಸಂಖ್ಯೆಗಳಿಂದ ಸ್ಪಷ್ಟವಾಗುವುದೇನೆಂದರೆ, ದೇಶದ ಒಟ್ಟು 70.5 ಮಿಲಿಯ ವ್ಯವಸಾಯ ಭೂಹಿಡುವಳಿಗಳಲ್ಲಿ, ಕೇವಲ ಶೇ. 4 ರಷ್ಟು -2 8 ಮಿಲಿಯ ಭೂಹಿಡುವಳಿಗಳು 100ಎಕರೆಗಳಿಗಿಂತಲೂ ಹೆಚ್ಚು ವಿಸ್ತೀರ್ಣವಿದ್ದು, ದೇಶದ ಒಟ್ಟು 1620 ಮಿಲಿಯ ಎಕರೆ ವ್ಯವಸಾಯ ಭೂಮಿಯಲ್ಲಿ ಶೇ. 31ರಷ್ಟು - 500ಮಿಲಿಯ ಎಕರೆಗಳಷ್ಟು ವ್ಯವಸಾಯ ಭೂಮಿಯನ್ನು ಹೊಂದಿವೆ. ಇದರ ತದ್ವಿರುದ್ಧವಾಗಿ, ಶೇ. 51 ರಷ್ಟು-35 7 ಮಿಲಿಯ ಭೂಹಿಡುವಳಿಗಳು 10 ಎಕರೆಗಳಿಗಿಂತಲೂ ಕಡಿಮೆ ವಿಸ್ತೀರ್ಣವಿದ್ದು, ಒಟ್ಟು ವ್ಯವಸಾಯ ಭೂಮಿಯ ಶೇ. 9 ರಷ್ಟು – 145 ಮಿಲಿಯ ಎಕರೆಗಳಷ್ಟು ವ್ಯವಸಾಯ ಭೂಮಿಯನ್ನು ಹೊಂದಿವೆ. ಶೇ. 34 ರಷ್ಟು ಭೂಹಿಡುವಳಿಗಳು ಶೇ. 30 ರಷ್ಟು ವ್ಯವಸಾಯ ಭೂಮಿಯನ್ನು ಹೊಂದಿವೆ. ಅಂದರೆ, ವ್ಯವಸಾಯ ಯೋಗ್ಯ ಭೂಮಿಯು ಕೆಲವೇ ಭೂಮಾಲಕ ಹಾಗೂ ಶ್ರೀಮಂತ ಕುಟುಂಬಗಳಲ್ಲಿ ಕೇಂದ್ರೀಕೃತವಾಗಿದೆ. ಇದರಿಂದಾಗಿ, ಗ್ರಾಮೀಣ ಆಸ್ತಿ (ಭೂಹಿಡುವಳಿಯೂ ಸೇರಿದಂತೆ) ಮೌಲ್ಯದ ವಿತರಣೆಯಲ್ಲಿಯೂ ತೀವ್ರ ಅಸಮಾನತೆಯಿದೆ. 1971-72 ರಲ್ಲಿ: ಒಟ್ಟು 55.7 ಮಿಲಿಯ ಗ್ರಾಮೀಣ ಕುಟುಂಬಗಳಲ್ಲಿ ಅತ್ಯಂತ ಕೆಳಗಿನ ಶೇ. 10 ಕುಟುಂಬಗಳು ಕೇವಲ ಶೇ. 0.21 ರಷ್ಟು ಆಸ್ತಿಮೌಲ್ಯವನ್ನು ಹೊಂದಿದ್ದವು. ಅವುಗಳ ಸರಾಸರಿ ಆಸ್ತಿಮೌಲ್ಯಗಳು ರೂ. 250 ಕ್ಕಿಂತಲೂ ಕಡಿಮೆ! ಅತ್ಯಂತ ಕೆಳಗಿನ ಶೇ. 30 ಕುಟುಂಬಗಳು ಕೇವಲ ಶೇ. 1.78 ರಷ್ಟು ಆಸ್ತಿಮೌಲ್ಯವನ್ನು ಹೊಂದಿದ್ದವು. ಅವುಗಳ ಸರಾಸರಿ ಆಸ್ತಿಮೌಲ್ಯಗಳು ರೂ. 1150 ಕ್ಕಿಂತಲೂ ಕಡಿಮೆ! ಅತ್ಯಂತ ಮೇಲ್ಮಟ್ಟದ ಶೇ.10 ಕುಟುಂಬಗಳು ಶೇ. 61.79 ರಷ್ಟು ಆಸ್ತಿಮೌಲ್ಯ ಹೊಂದಿವೆ. ಅವುಗಳ ಸರಾಸರಿ ಆಸ್ತಿಮೌಲ್ಯಗಳು ರೂ. 70,000 ದಷ್ಟು ಎಂದು ಅಂದಾಜು ಮಾಡಲಾಗಿದೆ! ಅತ್ಯಂತ ಮೇಲ್ಮಟ್ಟದ ಶೇ. 30 ಕುಟುಂಬಗಳ ಸರಾಸರಿ ಆಸ್ತಿಮೌಲ್ಯವು ರೂ. 3000 ಗಳಷ್ಟಾಗಿದ್ದು ಒಟ್ಟು ಆಸ್ತಿಮೌಲ್ಯದ ಶೇ. 85.31 ರಷ್ಟಾಗಿದೆ! 1961-62 ರಿಂದ 1971-72ರ ಅವಧಿಯಲ್ಲಿ ಒಟ್ಟು ಗ್ರಾಮೀಣ ಆಸ್ತಿ ಮೌಲ್ಯಗಳಲ್ಲಿ ಮೊದಲ ಶೇ. 90ರಷ್ಟು ಕುಟುಂಬಗಳ ಪಾಲು ಕೆಳಮಟ್ಟದಿಂದ ಮೇಲ್ಮಟ್ಟದವರೆಗೆ ಶೇ. 19.2 ರಿಂದ ಶೇ. 3.7ರ ವರೆಗೆ ಕಡಿಮೆಯಾಗಿ, ಅತ್ಯಂತ ಮೇಲ್ಮಟ್ಟದ ಶೇ. 10 ರಷ್ಟು ಕುಟುಂಬಗಳ ಪಾಲು ಮಾತ್ರ ಶೇ. 5.3 ರಷ್ಟು ಹೆಚ್ಚಿದೆ! ಅಂದರೆ ಹಸಿರು ಕ್ರಾಂತಿಯ ಫಲವೆಲ್ಲವೂ ಮೇಲ್ವರ್ಗದ ಗ್ರಾಮೀಣ ಕುಟುಂಬಗಳಿಗೇ ಹೆಚ್ಚು ಹೆಚ್ಚಾಗಿ ಸೇರಿದವು. ಈ ಅವಧಿಯಲ್ಲಿ ಗ್ರಾಮೀಣ ಕುಟುಂಬಗಳ ಸರಾಸರಿ ಆಸ್ತಿಮೌಲ್ಯಗಳು ರೂ 5369 ರಿಂದ ರೂ. 11310 ಕ್ಕೇರಿದರೂ, ಶೇ. 80 ರಷ್ಟು ಗ್ರಾಮೀಣ ಕುಟುಂಬಗಳ ಸರಾಸರಿ ಆಸ್ತಿಮೌಲ್ಯಗಳು ಇದಕ್ಕಿಂತಲೂ ಕಡಿಮೆಯಾಗಿವೆ! ಆಧಾರ: ಇಕನಾಮಿಕ್ಸ್ & ಪೊಲಿಟಿಕಲ್ ವೀಕ್ಲಿ, 19-3-1977)

ಮೂವತ್ತೆರಡು ವರುಷಗಳ ಭೂಸುಧಾರಣೆ ಭೂಮಾಲಕರ ಸುಧಾರಣೆಯಾಗಿದೆ! ಭೂಹಿಡುವಳಿಯ ಹಾಗೂ ಆಸ್ತಿಮೌಲ್ಯದ ವಿತರಣೆಯಲ್ಲಿ ಅಸಮಾನತೆಯು ಹೆಚ್ಚಿದೆ. ಸಮಸ್ಯೆ ಇನ್ನಷ್ಟೂ

ಗಂಭೀರವಾಗಿದೆ. 1968 ರಲ್ಲಿ ಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಮಹಲೋಬಿಸ್‌ರ ಸಮಿತಿಯ ವರದಿಯಂತೆ, ಭೂಮಸೂದೆಗಳು ಜಾರಿಗೆ ಬಂದಾಗ ಮತ್ತು 20 ಎಕರೆಗಳಷ್ಟು ಭೂಮಿತಿ ವಿಧಿಸಿದಾಗ, ದೇಶದಲ್ಲಿ ಒಟ್ಟು 630 ಲಕ್ಷ ಎಕರೆಗಳಷ್ಟು ವ್ಯವಸಾಯ ಭೂಮಿ ಮರುವಿತರಣೆಗೆ ಸಿಗುವುದೆಂದು ಅಂದಾಜು ಮಾಡಲಾಗಿತ್ತು. 1970-71 ರಲ್ಲಿ ದಾಂಡೇಕರ್ ಮತ್ತು ರಾತ್ ಅರ್ಥಶಾಸ್ತ್ರಜ್ಞರು 420 ಲಕ್ಷ ಹೆಚ್ಚುವರಿ ಭೂಮಿ ಸಿಗುವುದೆಂದು ಅಂದಾಜು ಮಾಡಿದ್ದರು. ಮುಂದೆ, 1972ರಲ್ಲಿ ಕೇಂದ್ರ ಕೃಷಿ ಮಂತ್ರಿಯ ಹೇಳಿಕೆಯಂತೆ, ಹೆಚ್ಚುವರಿ ಭೂಮಿಯ ಅಂದಾಜು 400 ಎಕರೆಗಿಳಿಯಿತು. ಆದರೆ, ಸಧ್ಯದ ಆರ್ಥಿಕ ಸಮೀಕ್ಷೆಯಂತೆ, ಇದುವರೆಗೆ 46 ಲಕ್ಷ ಎಕರೆಗಳಷ್ಟೇ ಭೂಮಿಯನ್ನು ಹೆಚ್ಚುವರಿ ಎಂದು ದೃಢೀಕರಿಸಲಾಗಿದ್ದು, ಅದರಲ್ಲೂ ಕೇವಲ 16 ಲಕ್ಷ ಎಕರೆ ಹೆಚ್ಚುವರಿ ಭೂಮಿಯನ್ನಷ್ಟೇ ಮರುವಿತರಣೆ ಮಾಡಲಾಗಿದೆ. ಇನ್ನೊಂದು ಸಮೀಕ್ಷೆಯಂತೆ, ಆರನೇ ಯೋಜನೆಯ (1978-83) ಆರಂಭದಲ್ಲಿ ಯೋಜನಾ ಆಯೋಗದ ಅಂದಾಜಿನಂತೆ ಮರುವಿತರಣೆಗೆ ಸಿಗಬಹುದಾದ ಹೆಚ್ಚುವರಿ ಭೂಮಿ ಕೇವಲ 86 ಲಕ್ಷ ಎಕರೆಗಳಾಗಿತ್ತು; ಸರಕಾರದ ಅಂದಾಜಿನಂತೆ ಕೇವಲ 69 ಲಕ್ಷ ಎಕರೆಗಳಾಗಿತ್ತು. ಜುಲೈ 1977ರಷ್ಟರಲ್ಲಿ ರಾಜ್ಯ ಸರಕಾರಗಳು ಇದುತನಕ ಕೇವಲ 20 ಲಕ್ಷ ಎಕರೆ ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಂಡು, 12.9 ಲಕ್ಷ ಎಕರೆಗಳಷ್ಟು ಭೂಮಿಯನ್ನು ಮರುವಿತರಣೆ ಮಾಡಿವೆ. ನಂತರದ ಒಂದು ವರುಷದಲ್ಲಿ ಕೇವಲ 3.31 ಲಕ್ಷ ಎಕರೆ ಭೂಮಿ ವಶಪಡಿಸಿಕೊಂಡು 2.86 ಲಕ್ಷ ಎಕರೆ ಭೂಮಿ ಮರುವಿತರಣೆ ಮಾಡಲಾಗಿದೆ. 1978 ರ ಅಂತ್ಯದೊಳಗೆ ಸರ್ಕಾರದ ಅಂದಾಜಿನಂತಿರುವ ಹೆಚ್ಚುವರಿ ಭೂಮಿಯನ್ನಾದರೂ ಮರುವಿತರಣೆ ಮಾಡಬೇಕೆಂದು ಉದ್ದೇಶಿಸಲಾಗಿದ್ದರೂ, ಈಗ ಈ ಕಾರ್ಯಕ್ರಮವನ್ನು 1983ರ ಒಳಗೆ ಮುಗಿಸಬೇಕೆಂದು ನಿರ್ಧರಿಸಲಾಗಿದೆ. ಮೂವತ್ತು ವರುಷಗಳಿಂದಲೂ ಮುಗಿಯದ ಭೂ ಸುಧಾರಣೆ, ಈ ರೀತಿಯಲ್ಲಿ ಈ ಶತಮಾನದ ಅಂತ್ಯದಲ್ಲೂ ಮುಗಿಯದು.

ಪರಿಣಾಮವಾಗಿ, ಉತ್ಪಾದನೆ ಸ್ಥಗಿತಗೊಂಡಿದೆ. ವ್ಯವಸಾಯಗಾರರ ಸಂಖ್ಯೆ ಕಡಿಮೆಯಾಗುತ್ತಿದೆ. ಕೃಷಿ ಕೂಲಿಗಾರರ ಸಂಖ್ಯೆ ಹೆಚ್ಚುತ್ತಿದೆ. ಅವರಲ್ಲಿ ನಿರುದ್ಯೋಗ ಅರೆಉದ್ಯೋಗ ಸಮಸ್ಯೆಗಳು ಹೆಚ್ಚುತ್ತಿದೆ. ಅವರ ಕೂಲಿ ಮಟ್ಟವು ಕುಸಿಯುತ್ತಿದ್ದು, ಗ್ರಾಹಕ ಶಕ್ತಿಯು ಕ್ಷಯಿಸುತ್ತಿದೆ. ಕೃಷಿ ಉತ್ಪನ್ನಗಳಿಗೆ ಕೈಗಾರಿಕಾ ಉತ್ಪನ್ನಗಳಿಗೆ ಗ್ರಾಮೀಣ ಮಾರುಕಟ್ಟೆ ಕ್ಷಯಿಸುತ್ತಿದೆ! ದೇಶದ ಸರ್ವತೋಮುಖವಾದ ಆರ್ಥಿಕ ಅಭಿವೃದ್ಧಿಯು ಇದರಿಂದಾಗಿ ಸ್ಥಗಿತಗೊಂಡಿದೆ. ಹೀಗಾಗಿ, ಭೂಮಿತಿ ಕಾಯಿದೆಗಳಂತೆ, ಹೆಚ್ಚುವರಿ ಭೂಮಿಯನ್ನೂ, ಸರಕಾರಿ ಬಂಜರು ಭೂಮಿಯನ್ನೂ ಬಡರೈತರಿಗೂ, ಭೂರಹಿತ ಕೃಷಿ ಕಾರ್ಮಿಕರಿಗೂ ಹಂಚುವುದು, ಉತ್ಪಾದನೆಗೆ ಅವರಿಗೆ ಬೇಕಾದ ಸಲಹೆ ಸಹಾಯ ಒದಗಿಸಿಕೊಡುವುದು, ಅವರ ಬೆಳೆಗೆ ಯೋಗ್ಯ ಬೆಲೆ ನೀಡುವುದು, ಕೃಷಿ ಕೂಲಿಕಾರರ ಕೂಲಿಮಟ್ಟವನ್ನು ಹೆಚ್ಚಿಸುವುದು ಆರ್ಥಿಕ ಕಾರ್ಯಕ್ರಮಗಳಲ್ಲಿ ಆದ್ಯತೆ ಪಡೆಯಬೇಕು.

●

ಮೈಕೋ ಸಂಘದ ಪದಾಧಿಕಾರಿಗಳ ಮೇಲೆ ಹಲ್ಲೆ

12-11-79ರಂದು ಮೈಕೋ ಕಾರ್ಮಿಕರ ಸಂಘದ ಕಛೇರಿಗೆ ಮೈಕೋ ಆಡಳಿತ ಮಂಡಳಿಯ ಕೆಲವು ಗೂಂಡಾಗಳು ನುಗ್ಗಿ ಸಂಘದ ಉಪಕಾರ್ಯದರ್ಶಿ ಮತ್ತು ಇತರರನ್ನು ಥಳಿಸಿ ರೇಡಿಯೋ ಕುರ್ಚಿ, ಮೇಜು, ಇತರ ಸಾಮಾನುಗಳನ್ನು ಧ್ವಂಸ ಮಾಡಿರುವುದನ್ನು ಸಿ. ಐ. ಟಿ. ಯು. ಉಗ್ರವಾಗಿ ಖಂಡಿಸುತ್ತದೆ.

ಈ ಅಹಿತ ಘಟನೆ ನಡೆಯುವ ಸಂದರ್ಭದಲ್ಲಿ ಕಛೇರಿಯ ಸಮೀಪ ಎರಡು ಪೋಲೀಸು ವ್ಯಾನುಗಳಿದ್ದರೂ ಸಹ ಪೋಲೀಸರು ಈ ಘಟನೆ ನಡೆಯುವುದನ್ನು ತಡೆಯದೆ ಮೌನ ಪ್ರೇಕ್ಷಕರಂತಿದ್ದುದು ಆಶ್ಚರ್ಯಕರ ಸಂಗತಿ. ಉನ್ನತ ಪೋಲೀಸ್ ಅಧಿಕಾರಿಗಳ, ಒಬ್ಬ ಮಂತ್ರಿಯ ಮಕ್ಕಳು, ಸಂಬಂಧಿಗಳು ಮೈಕೋನಲ್ಲಿ ಉನ್ನತ ಅಧಿಕಾರಿಗಳಾಗಿರುವುದರಿಂದ ಹೀಗಾಗಿರಬಹುದೇ ?

ತಕ್ಷಣವೇ ಪರಿಣಾಮಕಾರಿಯಾಗಿ ಮಧ್ಯಪ್ರವೇಶಿಸಿ ವಿವಾದವನ್ನು ಇತ್ಯರ್ಥಪಡಿಸಲು ಪ್ರಯತ್ನಿಸಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುವುದರೊಂದಿಗೆ ಸಿ.ಐ.ಟಿ.ಯು. ಮೈಕೋ ಕಾರ್ಮಿಕರ ನ್ಯಾಯಸಮ್ಮತವಾದ ಬೇಡಿಕೆಗಳಿಗೆ ಮತ್ತು ಅವರ ಮುಷ್ಕರಕ್ಕೆ ಸಂಪೂರ್ಣ ಬೆಂಬಲವನ್ನು ಕೊಡುತ್ತದೆ ಎಂಬುದಾಗಿ ಸಿ.ಐ ಟಿ.ಯು. ರಾಜ್ಯಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ. ನಂಜುಂಡಪ್ಪರವರು ಹೇಳಿಕೆ ಇತ್ತಿದ್ದಾರೆ.

●

ಆಮರಣ ಉಪವಾಸ

ಬಿಜಾಪುರ ಜಿಲ್ಲೆ, ಜಮಖಂಡಿ ತಾಲ್ಲೂಕು, ಸಮೀರವಾಡಿ ಸಕ್ಕರೆ ಕಾರ್ಖಾನೆಯ 500 ಕೆಲಸಗಾರರು ಕಳೆದ ಮೂರುವರೆ ತಿಂಗಳಿಂದ ಮುಷ್ಕರ ನಡೆಸುತ್ತಿದ್ದಾರೆ. ಮೂರನೇ ವೇಜ್‌ಬೋರ್ಡಿನ ಶಿಫಾರಸಿನಂತೆ ಹೆಚ್ಚಿನ ಪಗಾರ, ಶೇಕಡ 20ರಷ್ಟು ಬೋನಸ್ ಮೊದಲಾದ ಬೇಡಿಕೆಗಳ ಬಗ್ಗೆ ಕಾರ್ಮಿಕರು ಹೋರಾಟ ಪ್ರಾರಂಭಮಾಡಿ ಮೂರುವರೆ ತಿಂಗಳಿನ ನಂತರ ಮಂತ್ರಿಗಳು ಆಶ್ವಾಸನೆ ನೀಡಿದರೂ ಇದುವರೆಗೆ ಸಮಸ್ಯೆಗಳು ಇತ್ಯರ್ಥವಾಗದಿರುವುದರಿಂದ, ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಹನುಮಂತ ತೆಗ್ಗಿನಹಳ್ಳಿಯವರು ತಾ. 6-11-79 ರಿಂದ ಜಮಖಂಡಿ ಉಪ-ವಿಭಾಗಾಧಿಕಾರಿಗಳ ಕಛೇರಿ ಮುಂದೆ ಆಮರಣ ಉಪವಾಸ ಪ್ರಾರಂಭಿಸಿದ್ದಾರೆ. ಆ ದಿನ ಸಮೀರವಾಡಿಯಿಂದ ಜಮಖಂಡಿಯವರೆಗೆ (20 ಮೈಲಿ) ಕಾರ್ಮಿಕರು ಬೃಹತ್ ಪ್ರದರ್ಶನ ನಡೆಸಿದರು. ಸಂಜೆ ನಡೆದ ಸಾರ್ವಜನಿಕ ಸಭೆಯಲ್ಲಿ ಸಿ. ಐ. ಟಿ. ಯು. ಮುಖಂಡ ಕಾಂ. ಎಸ್. ಕೆ. ಉಪಾಧ್ಯಾಯ, ಎ. ಐ. ಟಿ. ಯು. ಸಿ. ಮುಖಂಡ ರವೀಂದ್ರ ಹಳಂಗಳಿ, ಸಂಘದ ಅಧ್ಯಕ್ಷ ಹೆಗ್ಗಳಗಿ, ಕುರುಕ್ಷೇತ್ರ ಸಂಪಾದಕ ಶ್ರೀ ಬಾಬುರೆಡ್ಡಿ ತುಂಗಳ, "ವಿಕ್ರಾಂತ ಭಾರತ"ದ ಸಂಪಾದಕ ಎಂ. ಸಿ. ಗೋಂದಿ, ನಾಶೀಮಠ ಮೊದಲಾದವರು ಮಾತನಾಡಿ ಮುಷ್ಕರಕ್ಕೆ ಬೆಂಬಲ ಕೋರಿದರು.

○

ಪ್ರೆಸ್ ಕಾರ್ಮಿಕರ ಪ್ರತಿನಿಧಿ ಸಭೆ

ತಾ. 11-11-79ನೇ ಭಾನುವಾರ ಎಸ್. ಕೆ. ಪ್ರೆಸ್ ಕಾರ್ಮಿಕರ ಪ್ರತಿನಿಧಿ ಸಭೆಯು ಸಂಘದ ಉಪಾಧ್ಯಕ್ಷರಾದ ಶ್ರೀ ಯು. ಪಿ. ಡಿಸೋಜರ ಅಧ್ಯಕ್ಷತೆಯಲ್ಲಿ ಜರುಗಿತು.

ಕಾರ್ಯದರ್ಶಿಯವರು ಪ್ರತಿನಿಧಿಗಳನ್ನು ಸ್ವಾಗತಿಸಿ ಇಂದು ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆಯು ಒಂದೇ ಸಮನೆ ಏರುತ್ತಿರುವ ಈ ಪರಿಸ್ಥಿತಿಯಲ್ಲಿ ಕಾರ್ಮಿಕರಿಗೆ ಜೀವನ ನಡೆಸಲು ಕಷ್ಟಕರವಾಗಿರುವುದನ್ನು ವಿವರಿಸಿದ ಬಳಿಕ ಸಭೆಯು ಈ ಬಗ್ಗೆ ಚರ್ಚಿಸಿ ಪ್ರೆಸ್ ಮಾಲಕರ ಮುಂದೆ ಈ ಕೆಳಗಿನ ಬೆಲೆಯೇರಿಕೆ ಪರಿಹಾರ ಕೇಳಿಕೆಯನ್ನಿಡಲು ತೀರ್ಮಾನಿಸಲಾಯಿತು.

1. ಹತ್ತು ವರ್ಷ ಮತ್ತು ಅದಕ್ಕಿಂತ ಮೇಲ್ಪಟ್ಟು ಸರ್ವಿಸ್ ಇದ್ದ ಪ್ರೆಸ್ ಕಾರ್ಮಿಕರಿಗೆ ದಿನವೊಂದಕ್ಕೆ ರೂ. 2-00ರಂತೆಯೂ, ಹತ್ತು ವರ್ಷಕ್ಕಿಂತ ಕಡಿಮೆ ಸರ್ವಿಸ್ ಇದ್ದ ಕಾರ್ಮಿಕರಿಗೆ ದಿನವೊಂದಕ್ಕೆ ರೂ. 1-50 ರಂತೆಯೂ ಸಿಗಬೇಕು.

2. ಪ್ರೆಸ್ ಕಾರ್ಮಿಕರಿಗೆ ವಿಶೇಷ ಆವಶ್ಯಕತೆಗೆ ಸಾಲವಾಗಿ ಸಹಾಯವಾಗುವಂತೆ ಮಾಲಕರು ಕೊಡಲು ಕ್ಷೇಮ ನಿಧಿಯೊಂದನ್ನು ತೆರೆಯಬೇಕು.

3. ಪ್ರಾವಿಡೆಂಟ್ ಫಂಡಿನ ರಶೀತಿಯು ಸರಿಯಾಗಿ ಬಾರದಿದ್ದುದರಿಂದ ಬಾಕಿಯಿರುವ ರಶೀತಿಯನ್ನು ಕೂಡಲೇ ಕಾರ್ಮಿಕರಿಗೆ ಸಿಗುವಂತೆ ಕ್ರಮ ಕೈಗೊಳ್ಳಬೇಕೆಂದು ಪ್ರಾವಿಡೆಂಟ್ ಫಂಡ್ ಇಲಾಖೆಯನ್ನು ಕೇಳಿಕೊಳ್ಳುವುದು.

4. ಬೆಂಗಳೂರಿನ ಮೈಕೋ ಕಾರ್ಮಿಕರ ಹೋರಾಟಕ್ಕೆ ಮತ್ತು ದಾಂಡೇಲಿ ಫೆರ್ರೋ ಅಲಾಯ್ಸ್ ಕಂಪನಿಯ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸುವ ನಿರ್ಣಯಗಳನ್ನು ಸಭೆಯು ಸ್ವೀಕರಿಸಿತು.

ತಾ. 21ರ ರೈತಕಾರ್ಮಿಕರ ಬೇಡಿಕೆ ದಿನವನ್ನು ಯಶಸ್ವಿಗೊಳಿಸಲು ತೀರ್ಮಾನಿಸಿ ಸಭೆ ಮುಕ್ತಾಯವಾಯಿತು. ○

"ಶ್ರೀ ಶಕ್ತಿ ಮಿತ್ರ ಮಂಡಳಿ" ಉದ್ಘಾಟನೆ

ದ. ಕ. ಜಿಲ್ಲೆ, ಮಂಗಳೂರು ನಗರದ ಪದವು ಪ್ರದೇಶದಲ್ಲಿ ತಾ. 4-11-79 ರಂದು "ಶ್ರೀ ಶಕ್ತಿ ಮಿತ್ರ ಮಂಡಳಿ" ನಗರ ಸಭೆಯ ಮಾಜೀ ಅಧ್ಯಕ್ಷರಾದ ಶ್ರೀ ಕ್ಸೇವಿಯರ್ ಪಿಂಟೋ ರವರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ವಿನಾಯಕ ಮೊಜಾಯಿಕ್ ಇಂಡಸ್ಟ್ರೀಸ್‌ನ ಮೇನೇಜಿಂಗ್ ಪಾರ್ಟ್ನರ್ ಶ್ರೀ ಕೆ. ಎ. ಸೇರಿಗಾರ ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ಪೀಟರ್ ಡಿಸೋಜ ಸ್ವಾಗತಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಯುವಕರು ಬಡಜನತೆಗೆ ಸಹಾಯ ಮಾಡಲು ಮುಂದೆ ಬಂದಿರುವುದನ್ನು ಶ್ಲಾಘಿಸಿ, ಸಂಘ ಚಿರಕಾಲ ಸಾರ್ವಜನಿಕರ ಸೇವೆ ಮಾಡಲೆಂದು ಆಶಿಸಿದರು. ಸಂಘದ ಕಾರ್ಯದರ್ಶಿಗಳು ಎಲ್ಲರನ್ನೂ ವಂದಿಸಿದರು.

●

ಸರಪಾಡಿಯಲ್ಲಿ ಸಾರ್ವಜನಿಕ ಸಭೆ

ದ.ಕ. ಜಿಲ್ಲಾ ಬಂಟ್ವಾಳ ತಾಲ್ಲೂಕಿನ ಸರಪಾಡಿ ಗ್ರಾಮದ ಆಲ್ಲಿಪಾದೆ ಎಂಬಲ್ಲಿ ರೈತ, ಕೃಷಿಕೂಲಿಗಾರರ ಮತ್ತು ಬೀಡಿ ಕಾರ್ಮಿಕರ ಬಹಿರಂಗ ಸಭೆಯು ತಾ. 11-11-1979ರಂದು ಶ್ರೀ ಎಂ. ಚಂದಪ್ಪ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಶ್ರೀಕೇಶ್ ಸ್ವಾಗತಿಸಿದ ಬಳಿಕ ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಬಿ. ಎಚ್. ಬಂಗೇರ ಮತ್ತು ಜಿಲ್ಲಾ ಬೀಡಿ ವರ್ಕರ್ಸ್ ಫೆಡರೇಷನ್ನಿನ ಮುಂದಾಳು ಕಾಂ. ಜೆ. ವೀರಪ್ಪನವರು ಮಾತನಾಡುತ್ತಾ ಗ್ರಾಮಾಂತರ ಪ್ರದೇಶದಲ್ಲಿ ಮುಖ್ಯವಾಗಿ ಕೃಷಿಕೂಲಿಗಾರರು, ಬೀಡಿ ಕಾರ್ಮಿಕರು ಮತ್ತು ಸಾಗುವಳಿದಾರ ರೈತರು ಸಂಘಟಿತರಾಗಿ ಸಂಯುಕ್ತ ಹೋರಾಟ ನಡೆಸಲು ಕರೆನೀಡಿದರು. ಶ್ರೀ ಎಮ್. ಚಂದಪ್ಪ ಪೂಜಾರಿಯವರು ಧನ್ಯವಾದವಿತ್ತ ಬಳಿಕ ಸಭೆ ಮುಕ್ತಾಯವಾಯಿತು.

●

ಬೀಡಿ ಕಾರ್ಮಿಕರ ಸಭೆ

ದ. ಕ. ಜಿಲ್ಲೆ ಬಂಟ್ವಾಳ ತಾಲ್ಲೂಕಿನ ನೆಟ್ಲ ಮುಡೂರು ಗ್ರಾಮದ ನೇರಳೆ ಕಟ್ಟೆ ಎಂಬಲ್ಲಿ ಬೀಡಿಕಾರ್ಮಿಕರ ಸಭೆಯು ಪಂಚಾಯತ್ ಬೋರ್ಡ್ ಸದಸ್ಯ ಕಿಟ್ಟಪ್ಪ ನಾಯ್ಕರ ಅಧ್ಯಕ್ಷತೆಯಲ್ಲಿ ತಾ. 9-11-1979 ರಂದು ಜರಗಿತು.

ಸಭೆ ಕರೆದ ಉದ್ದೇಶವನ್ನು ವಿವರಿಸುತ್ತಾ, ಬೀಡಿ ಕಾರ್ಮಿಕರು ಸಂಘಟಿತರಾಗಿ, ಹೋರಾಟ ನಡೆಸಿ, ತಮ್ಮ ಮೇಲಾಗುತ್ತಿರುವ ಶೋಷಣೆಯನ್ನು ತಡೆಯಲು ಮುಂದಾಗಬೇಕೆಂದು ಬಂಟ್ವಾಳ ತಾಲ್ಲೂಕು ಬೀಡಿಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ. ಬಿ. ನಾರಾಯಣರು ಕರೆ ನೀಡಿದರು.

ಕಾಂ. ಕಿಟ್ಟಪ್ಪ ನಾಯ್ಕ ಅಧ್ಯಕ್ಷ, ಕಾಂ. ಎನ್. ರಾಮಚಂದ್ರ ಉಪಾಧ್ಯಕ್ಷ ಕಾಂ. ಎ. ಚಂದು ಕಾರ್ಯದರ್ಶಿ ಕಾಂ. ಎನ್. ಮೊಹಮ್ಮದ್ ಬಿ. ಎ. ಜತೆ ಕಾರ್ಯದರ್ಶಿಯಾಗಿರುವ ಹನ್ನೊಂದು ಜನರಿರುವ ಬೀಡಿ ಮಜೂರರ ಸಮಿತಿಯನ್ನು ರಚಿಸಲಾಯಿತು.

ಎನ್. ರಾಮಚಂದ್ರನವರು ಧನ್ಯವಾದವಿತ್ತ ಬಳಿಕ ಸಭೆ ಮುಕ್ತಾಯವಾಯಿತು. ○

ಪಕ್ಷದಿಂದ ಉಚ್ಚಾಟನೆ

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕು ಅರೇಹಳ್ಳಿಯಲ್ಲಿರುವ ಶ್ರೀ ಎ. ಚಿನ್ನಪ್ಪನವರನ್ನು ದುರ್ನಡತೆ, ಅಸಭ್ಯ ವರ್ತನೆ, ಕಾರ್ಮಿಕ ವಿರೋಧಿ ಮತ್ತು ಪಾರ್ಟಿ ವಿರೋಧಿ ಚಟುವಟಿಕೆಗಳಿಗಾಗಿ ತಾ. 8-11-1979 ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಪ್ರಾಥಮಿಕ ಸದಸ್ಯತ್ವದಿಂದ ವಜಾಮಾಡಿ ಪಕ್ಷದಿಂದ ಹೊರಹಾಕಲಾಗಿದೆ ಎಂದು ಹಾಸನ-ಚಿಕ್ಕಮಗಳೂರು ಜಿಲ್ಲೆಗಳ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಂಯುಕ್ತ ಮಂಡಳಿ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಪ್ರಕಟಣೆಯೊಂದರಲ್ಲಿ ತಿಳಿಸಿದ್ದಾರೆ.

REG. KRNB-368 MAG (2) PRB DECR 319/78-79 ನವೆಂಬರ್ 18, 1979

‘ಇಷ್ಟದಾನ’ ವಿರೋಧಿಸುವ ಜೀಪು ಜಾಥಾ ಉದ್ಘಾಟನೆ

ಕೇರಳ ವಿಧಾನ ಸಭೆಯಲ್ಲಿ ಪಾಸು ಮಾಡಲ್ಪಟ್ಟ ‘ಇಷ್ಟದಾನ’ ಬಿಲ್ಲಿಗೆ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಲು ಹಾಗೂ ಕೆಲವೇ ಮಂದಿ ಧಾರ್ಮಿಕ ಮುಖಂಡರುಗಳ, ಜಾತೀಯವಾದಿ ಶಕ್ತಿಗಳ ಮತ್ತು ಸರ್ವಾಧಿಕಾರೀ ಶಕ್ತಿಗಳ ಬೆಂಬಲದಿಂದ ಅಧಿಕಾರಕ್ಕೆ ಬಂದ ಕೋಯಾ ಮಂತ್ರಿಮಂಡಲವು ಕೇರಳ ರಾಜ್ಯದ ಲಕ್ಷಾಂತರ ಕೃಷಿ ಕೂಲಿಗಾರರನ್ನು ಸುಲಿಗೆ ಮಾಡಲು ಹೊರಟಿರುವ ವಿಷಯಗಳನ್ನು ಕೇರಳ ದಾದ್ಯಂತ ಜನರಿಗೆ ವಿಷಧೀಕರಿಸಲು ಕಾಂ. ಪಿ.ಪಿ. ಕೋರನ್‌ರವರ ಮುಖಂಡತ್ವದಲ್ಲಿ ಹೊರಟ ಜೀಪು ಜಾಥಾವನ್ನು ತಾ. 30-10-79 ರಂದು ಮಂಜೇಶ್ವರದ ಸುಂಕದ ಕಟ್ಟೆಯಲ್ಲಿ ಕಾಂ. ರಾಮಣ್ಣರೈಯವರು ಉದ್ಘಾಟಿಸಿದರು. ಸಭೆಯಲ್ಲಿ ಕಾಂ. ಬಿ. ಎಂ. ರಾಮಯ್ಯ ಶೆಟ್ಟಿ, ಕಾಂ. ಅಬೂಬಕ್ಕರ್, ಕಾಂ. ಕೆ. ಗೋಪಾಲ ಮುಂತಾದವರು ಭಾಷಣ ಮಾಡಿದರು. ಕಾಂ. ಜಾರಪ್ಪ ಶೆಟ್ಟಿ ಮಾಸ್ಟರ್ ಅಧಕ್ಷತೆಯಲ್ಲಿ ಸಭೆ ಸೇರಿತ್ತು. ಈ ಜಾಥಾವು ತಾ. 31-10-79 ರಂದು ಪ್ರಯಾಣ ಪ್ರಾರಂಭಿಸಿತು. ಹೊಸಂಗಡಿ, ಉಪ್ಪಳ, ಕುಂಬಳೆ ಮೊದಲಾದೆಡೆ ಬಹಿರಂಗ ಸಭೆಗಳನ್ನು ಏರ್ಪಡಿಸಲಾಗಿತ್ತು. ಇದೇ ತಾ. 4-11-79ರಂದು ಈ ಜಾಥಾವು ತಲಿಪ್ಪರಂಬಿನಲ್ಲಿ ಸಮಾಪ್ತಿಯಾಯಿತು.

ಇನ್ನೊಂದು ಜಾಥಾವು ಕುಟ್ಟಿಯೂರಿನಲ್ಲಿ ಉದ್ಘಾಟಿಸಲ್ಪಟ್ಟು, ಅತ್ತಾಯಕುನ್ನಿಯಲ್ಲಿ ಸಮಾಪ್ತಿಗೊಂಡಿತು. ದಾರಿಯುದ್ದಕ್ಕೂ, ಕೃಷಿಕಾರ್ಮಿಕ ಸಂಘಟನೆಗಳು, ಕೆ. ಜಿ. ಪಿ. ಟಿ. ಎ., ಎನ್. ಜಿ. ಓ. ಹಾಗೂ ಇನ್ನಿತರ ಸಂಘಟನೆಗಳಿಂದ ಸ್ವಾಗತ ಸಭೆಗಳ ಏರ್ಪಾಡು ಮಾಡಲಾಗಿತ್ತು. ಕೇರಳದ ವಂಚಕ ರಂಗದ ಜನವಿರೋಧಿ ನೀತಿಯನ್ನು ಖಂಡಿಸಿ, ಶತ್ರುವರ್ಗಕ್ಕೆ ತಕ್ಕ ಶಾಸ್ತಿಯನ್ನು ಮಾಡುವಲ್ಲಿ ಕೇರಳದ ಜನರು ಮುಂದಾಗಬೇಕೆಂದು ಈ ಜಾಥಾವು ಕರೆ ಕೊಟ್ಟಿರುತ್ತದೆ.

○

ಐಕ್ಯ ಹೋರಾಟಕ್ಕೆ ಕರೆ

[ಒಂದನೇ ಪುಟದಿಂದ]

ನೇಷನಲ್ ಮುಸ್ಲಿಂ ಲೀಗ್‌ನ ವಿಧಾನ ಸಭಾ ಸದಸ್ಯ, ಯುವ ಕಾಂಗ್ರೆಸ್ ಮುಂದಾಳು ಶ್ರೀ ಪತ್ತಿಕಟ್ಟಿ ಮೊದಲಾದವರು ಮಾತನಾಡಿದರು. ಅತಿಥಿಯಾಗಿ ಬಂದಿದ್ದ ರಾಜ್ಯ ಕಾರ್ಮಿಕ ಸಚಿವ ಶ್ರೀ ಸಿದ್ದಿಕ್ಕಿಯವರು ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಹೋರಾಡುವುದರಿಂದಲೇ ಗುರಿಸಾಧಿಸುವುದು ಸಾಧ್ಯ ಎಂದರು. ನಿರ್ಣಯವನ್ನು ಸರ್ವಾನುಮತದಿಂದ ಒಪ್ಪಿಕೊಂಡಮೇಲೆ ಬೆಳಿಗ್ಗೆ 10-30ಕ್ಕೆ ಪ್ರಾರಂಭವಾದ ಪ್ರತಿನಿಧಿ ಸಭೆಯು ಮಧ್ಯಾಹ್ನ 2 ಘಂಟೆಗೆ ಮುಕ್ತಾಯವಾಯಿತು.

ಸಂಜೆ ನೆಹರು ಪಾರ್ಕಿನಲ್ಲಿ ಸೇರಿದ್ದ ಬಹಿರಂಗ ಸಭೆಯ ಅಧ್ಯಕ್ಷ ಸ್ಥಾನವನ್ನು ಶ್ರೀ ಸಿದ್ದರಾಮರೆಡ್ಡಿ ವಹಿಸಿದ್ದರು. ಸಿ. ಪಿ ಐ. ಮುಖಂಡ ಕಾಂ. ಗೋವಿಂದನಾಯರ್ ರಿಪಬ್ಲಿಕನ್ ಪಕ್ಷದ ಮುಖಂಡ ಶ್ರೀಗವಾಯಿ, ಸಿ.ಪಿ ಐ. (ಎಂ) ರಾಜ್ಯ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಮೊದಲಾದವರು ಭಾಷಣ ಮಾಡಿದರು. ಎಡ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯ ಅವಶ್ಯಕತೆಯನ್ನು ವಿವರಿಸಿದ ಕಾಂ. ನಾಯರ್ ಅವರು, ಈ ರಾಜ್ಯದಲ್ಲಿ ಒಂದಾಗಿ ಹೋರಾಡಲು ಕರೆಇತ್ತರು. ಸಭೆಗೆ ಮೊದಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷದ ನೇತೃತ್ವದಲ್ಲಿ ದೊಡ್ಡದಾದ ಮೆರವಣಿಗೆಯು ಪಾರ್ಕಿಗೆ ಬಂದಿತ್ತು.

●

ಗಮನಿಸಿ

ಕಳೆದ ಸಂಚಿಕೆಯ ಪರಿಸರದಲ್ಲಿ ಮೊದಲಿನದ್ದರಲ್ಲಿ ಸಿ. ಐ. ಎ. ಎಂಬುದು ತಪ್ಪಾಗಿ ಸಿ.ಪಿ.ಐ. ಎಂದು ಅಚ್ಚಾಗಿತ್ತು. ಕೊನೆಯದ್ದರಲ್ಲಿ ಸರ್‌ದೇಸಾಯಿ ಬದಲು ಶೇಷಾದ್ರಿ ಎಂಬುದಾಗಿ ಅಚ್ಚಾಗಿತ್ತು. ಇದನ್ನು ಸರಿಪಡಿಸಿ ಓದಿಕೊಳ್ಳಬೇಕಾಗಿ ವಿನಂತಿ. ಅಚ್ಚಾಗುವಾಗ ತಪ್ಪಾದುದಕ್ಕೆ ವಿಷಾದಿಸುತ್ತೇವೆ.

ವಿ.ಸೂ. : ಲೇಖನವನ್ನು ಕಳುಹಿಸುವವರು ಪುಟದ ಒಂದೇ ಮಗ್ಗುಲಲ್ಲಿ ಬರೆಯತಕ್ಕದ್ದು; ಅಕ್ಷರವು ಸ್ಫುಟವಾಗಿರಬೇಕು. ಇಲ್ಲವಾದಲ್ಲಿ ಲೇಖನವನ್ನು ಪ್ರಕಟಿಸಲಾಗುವುದಿಲ್ಲ.

—ಸಂ.

ಪದಾಧಿಕಾರಿಗಳ ಆಯ್ಕೆ

ಉತ್ತರಕನ್ನಡ ಜಿಲ್ಲೆ, ದಾಂಡೇಲಿಯಲ್ಲಿನ ‘ವೆಸ್ಟ್‌ಕೋಸ್ಟ್ ಪೇಪರ್ ಮಿಲ್ ಎಂಪ್ಲಾಯೀಸ್ ಯೂನಿಯನ್’ ಕಾರ್ಯಕಾರಿ ಮಂಡಲಿಯು ತಾ. 13-8-79 ರಂದು ಸಭೆ ಸೇರಿ 1979-80 ರ ಸಾಲಿಗೆ ಈ ಕೆಳಗಿನ ಪದಾಧಿಕಾರಿಗಳನ್ನು ಆಯ್ಕೆ ಮಾಡಿತು.

1) ಕಾಂ. ಜಿ. ವಿ. ಪವಾರ-ಅಧ್ಯಕ್ಷರು, 2) ಕಾಂ. ರಾಜೇಂದ್ರ ಪ್ರಸಾದ್–ಉಪಾಧ್ಯಕ್ಷರು, 3) ಕಾಂ. ಕೆ.ಎಂ.ಆರ್. ಮೆನನ್–ಉಪಾಧ್ಯಕ್ಷರು 4) ಕಾಂ. ಆರ್. ಜಿ. ಸ್ಥಳೇಕರ್–ಕಾರ್ಯದರ್ಶಿ, 5) ಕಾಂ. ಎಂ. ಆರ್. ನಾಯ್ಕ–ಸಹ ಕಾರ್ಯದರ್ಶಿ, 6) ಕಾಂ. ಎಂ. ಜೆ. ಜನ್ನು–ಕೋಶಾಧ್ಯಕ್ಷರು.

ದಾಂಡೇಲಿ ಪೇಪರ್ ಮಿಲ್ಲಿನ ಆಡಳಿತ ವರ್ಗ ಕಳೆದ ವರ್ಷ ನಿಡಿದ ಬೇಡಿಕೆಗಳನ್ನು ಇದುವರೆಗೂ ಇತ್ಯರ್ಥ ಪಡಿಸದಿರುವುದರಿಂದ ತಾ. 24-10-79 ರಿಂದ ಅನಿರ್ಧಿಷ್ಟ ಮುಷ್ಕರ ಹೂಡುವುದಾಗಿ, ಕಾರ್ಮಿಕ ಸಂಘ ನೋಟೀಸು ನೀಡಿತ್ತು. ಇದರಿಂದ ಆಡಳಿತ ವರ್ಗ ತಾ. 23-10-79 ರಂದು ಸಂಜೆ 4 ಗಂಟೆಗೆ ಮಾತುಕತೆ ನಡೆಸಲು ಕಾರ್ಮಿಕ ಮುಖಂಡರನ್ನು ಕರೆಸಿದರು. ಮಾತುಕತೆಯಲ್ಲಿ ಕೂಡಲೇ ಗ್ರೇಡೇಶನ್ ಕೊಡುವುದಾಗಿ ಆಡಳಿತ ವರ್ಗದವರು ಒಪ್ಪಿಕೊಂಡಿರುವುದರಿಂದ ಮುಷ್ಕರ ಮುಂದೂಡಲಾಗಿದೆ. ಮಾತುಕತೆಗಳು ಇನ್ನೂ ನಡೆಯುತ್ತಿವೆ. ಈ ಹಿಂದೆ ಆಡಳಿತ ವರ್ಗ ಮಾತುಕತೆ ನಡೆಸಲು ಸಿದ್ಧವಾಗಿರಲಿಲ್ಲವೆಂಬುದು ಇಲ್ಲಿ ಗಮನಾರ್ಹ.

* * *

ಕಾರವಾರ ಜಿಲ್ಲಾ, ಬಲ್ಲಾರಪುರ ಇಂಡಸ್ಟ್ರೀಸ್ ಎಂಪ್ಲಾಯೀಸ್ ಯೂನಿಯನ್, ಬಿನಗಾ ಕಾಸ್ಟಿಕ್ ಸೋಡಾ ಫ್ಯಾಕ್ಟರಿಯಲ್ಲಿ, ಸಿ. ಐ. ಟಿ. ಯು. ಒಲವಿನ ಈ ಕೆಳಗಿನ ಪದಾಧಿಕಾರಿಗಳು 1979-80 ನೇ ಸಾಲಿಗೆ ಆರಿಸಿದ್ದಾರೆ.

ಕಾಂ. ಆರ್. ಜಿ. ಸ್ಥಳೇಕರ್-ಅಧ್ಯಕ್ಷರು

ಕಾಂ. ಪಿ.ವಿ. ಗಾಂವಕರ್-ಉಪಾಧ್ಯಕ್ಷ

ಕಾಂ. ಕೆ.ಎಸ್. ಕೃಷ್ಣಪ್ಪ-ಪ್ರಧಾನ ಕಾರ್ಯದರ್ಶಿ

ಕಾಂ. ಕೆ.ಎಸ್. ನಾಯ್ಕರಾಣೆ-ಸಹ ಕಾರ್ಯದರ್ಶಿ

ಕಾಂ. ಎಸ್. ಎನ್. ನಾಯ್ಕ-ಕೋಶಾಧ್ಯಕ್ಷ.

●

ಸಂಪಾದಕೀಯ

[ಒಂದನೇ ಪುಟದಿಂದ]

ರೀತಿಯ ಇನ್ಸೆಂಟಿವ್ ಬೋನಸ್. ಅಂದರೆ ಉತ್ಪಾದನೆಗೆ ಸಂಬಂಧಿಸಿದ ಬೋನಸ್. ಬೋನಸ್ ಕೊಡುವುದನ್ನು ಉತ್ಪಾದನೆಗೆ ಜೋಡಿಸುವ ಸೂತ್ರಕ್ಕೆ ಸಿ. ಐ. ಟಿ. ಯು. ಮೊದಲಿನಿಂದಲೂ ವಿರೋಧ ಮಾಡಿತ್ತು. ಈಗಲೂ ಅದನ್ನು ವಿರೋಧಿಸುತ್ತದೆ.

ಈಗಾಗಲೇ ಮಾಲಿಕವರ್ಗದ ಪ್ರತಿನಿಧಿಗಳೂ, ಬಂಡವಾಳಶಾಹಿ ಪತ್ರಿಕೆಗಳೂ ಸರಕಾರದ ಈ ಹೊಸ ನೀತಿಯನ್ನು ಸ್ವಾಗತಿಸಿದ್ದಲ್ಲದೆ ಅದನ್ನು ಎಲ್ಲ ಕ್ಷೇತ್ರಗಳಲ್ಲೂ ಜಾರಿಗೆ ತರಬೇಕೆಂದೂ, ಬೋನಸ್ ಶಾಸನವನ್ನೇ ತಿದ್ದುಪಡಿ ಮಾಡಬೇಕೆಂದೂ ಪ್ರಚಾರ ಆರಂಭಿಸಿವೆ. ಆದ್ದರಿಂದ ಸರಕಾರದ ಈ ಸೂತ್ರದಿಂದ ರೈಲ್ವೆ ಕಾರ್ಮಿಕರಿಗೆ ಮಾತ್ರವಲ್ಲದೆ ಭಾರತದ ಎಲ್ಲ ಕಾರ್ಮಿಕರಿಗೂ ಅಪಾಯವಿದೆಂದು ಎಚ್ಚರಿಕೆ ಕೊಡಬೇಕಾಗಿದೆ. ●

ಕೇರಳ ಸೋಷಲಿಸ್ಟ್ ಯುವಜನ ಫೆಡರೇಷನ್ ಸಭೆ

ಮಂಜೇಶ್ವರ ಬ್ಲಾಕ್ ಯೂತ್ ಫೆಡರೇಷನ್ನಿನ ವಿಶೇಷ ಸಭೆಯೊಂದು ತಾ. 4-11-79ನೇ ಆದಿತ್ಯವಾರ ಬೆಳಿಗ್ಗೆ 10 ಗಂಟೆಗೆ ಕಾಂ. ಚಂದ್ರಹಾಸ ಮಾಸ್ಟರ್‌ರವರ ಅಧ್ಯಕ್ಷತೆಯಲ್ಲಿ ಮಂಜೇಶ್ವರ ಟೌನ್ ಬ್ಯಾಂಕಿನ ಕಟ್ಟಡದಲ್ಲಿ ಜರಗಿತು.

ಸಭೆಯಲ್ಲಿ ಕಾಂ. ಬಿ. ಎಮ್. ಮಾಧವನವರು ಸ್ವಾಗತ ಭಾಷಣ ಮಾಡಿ, ಈ ತುಳು ಪ್ರದೇಶದಲ್ಲಿ ಮೂಢನಂಬಿಕೆ, ಅನಾಚಾರ ಅನ್ಯಾಯಗಳು ತುಂಬಿಕೊಂಡಿರುವಾಗ, ಅದನ್ನು ನಿವಾರಿಸಲು ಜನರಿಗೆ ವೈಜ್ಞಾನಿಕ ವಿದ್ಯಾಭ್ಯಾಸ ಮತ್ತು ತಿಳುವಳಿಕೆ ಹಾಗೂ ಪ್ರಸ್ತುತ ರಾಜಕೀಯ ಪರಿಸ್ಥಿತಿಯನ್ನು ಜನರಿಗೆ ತಿಳಿಸುವಲ್ಲಿ ಯುವಕರ ಪ್ರಾಮುಖ್ಯವಾದ ಪಾತ್ರವೇನೆಂಬುದನ್ನು ವಿವರಿಸಿದರು.

ಸಭೆಗೆ ಆಗಮಿಸಿದ ಮಂಜೇಶ್ವರ ಪಂಚಾಯತು ಅಧ್ಯಕ್ಷ ಕಾಂ. ಬಿ. ಎಮ್. ರಾಮಯ್ಯ ಶೆಟ್ಟಿಯವರು ಭಾಷಣಮಾಡಿ ಹಳೆಕಾಲದ ಧಾರ್ಮಿಕ ವ್ಯವಸ್ಥೆಯನ್ನು ಮರಳಿ ಸ್ಥಾಪಿಸಲು ಪ್ರಯತ್ನಿಸುವ ಕೋಮುಶಕ್ತಿಯನ್ನೂ, ಇನ್ನೊಂದು ಕಡೆಯಿಂದ ತುರ್ತುಪರಿಸ್ಥಿತಿಯಿಂದ ಭಾರತದ ಜನರ ರಕ್ತವನ್ನೇ ಕುಡಿಯಲು ಹವಣಿಸಿದ ಸರ್ವಾಧಿಕಾರಿ ಶಕ್ತಿಯನ್ನೂ ಈ ರಾಜ್ಯದಿಂದ ಹೊಡೆದೋಡಿಸಲು ಯುವಕರೆಲ್ಲಾ ಒಂದಾಗಿ ಪ್ರತಿಭಟನೆಯ ರಣಕಹಳೆಯನ್ನು ಊದಲು ಸಿದ್ಧರಾಗಬೇಕೆಂದು ಕರೆಯಿತ್ತರು.

ಕೊನೆಗೆ ಕಾಂ. ಚಂದ್ರಹಾಸಶೆಟ್ಟಿಯವರು ಅಧ್ಯಕ್ಷರಾಗಿಯೂ, ಕಾಂ. ಯು. ವಸಂತನವರು ಕಾರ್ಯದರ್ಶಿಯವರಾಗಿಯೂ ಇರುವ 21 ಸದಸ್ಯರ ಬ್ಲಾಕ್ ಸಮಿತಿಯನ್ನು ರಚಿಸಲಾಯಿತು.

○

ಪರಿಸರ

ದೇಶದ 352 ಜಿಲ್ಲೆಗಳಲ್ಲಿ 146 ಜಿಲ್ಲೆಗಳು ಕ್ಷಾಮಪೀಡಿತ ಪ್ರದೇಶಗಳಾಗಿವೆ.

—ದಿ ಹಿಂದೂ

“ತಾವೇನಾದರು ಕಾರ್ಟರ್ ಅವರ ಸ್ಥಾನದಲ್ಲಿದ್ದರೆ ಷಾ ಅವರನ್ನು ಒಪ್ಪಿಸಬೇಕೆಂಬ ಇರಾನ್ ಬೇಡಿಕೆಗೆ ಖಂಡಿತ ಮಣಿಯುತ್ತಿರಲಿಲ್ಲ” ಎಂದಿರುವ ಈಜಿಪ್ಟ್ ಅಧ್ಯಕ್ಷ ಅನ್ವರ್ ಸಾದತ್ ಅವರು ಅಯತೊಲ್ಲ ಖೊಮೈನಿ “ಧರ್ಮಾಂಧ” ಎಂದು ಬಣ್ಣಿಸಿದ್ದಾರೆ.

—ಕನ್ನಡ ಪ್ರಭ

ಪಶ್ಚಿಮ ಬಂಗಾಲದ ಎಡರಂಗ ಶಾಸಕರಲ್ಲಿ 125 ಶಾಸಕರು ಗ್ರಾಮ ಪ್ರದೇಶಗಳಿಂದ ಆಯ್ಕೆಯಾಗಿದ್ದು, ಅವರು ತಮ್ಮೆಲ್ಲ ಗಮನವನ್ನು ಆ ಕ್ಷೇತ್ರಗಳಲ್ಲಿಯೇ ಕೇಂದ್ರೀಕರಿಸಿ ಗ್ರಾಮೀಣ ಜನತೆಯ ನಿತ್ಯ ಬದುಕಿನ ಬಗ್ಗೆಯೇ ತಲ್ಲೀನರಾಗಿರುತ್ತಾರೆ, ಹಾಗೂ ಸರ್ಕಾರ ಮತ್ತು ಗ್ರಾಮಗಳ ನಡುವೆ ಸಜೀವ ಸಂಬಂಧವನ್ನು ಹೊಂದಿದ್ದಾರೆ.

—ಭಬಾನಿಸೆನ್‌ಗುಪ್ತ ಅವರ

ಸಿ. ಪಿ. ಐ. (ಎಂ) ಪ್ರಾಮಿಸಸ್. ಪ್ರಾಸ್ಪೆಕ್ಟ್. ಪ್ರಾಬ್ಲೆಮ್ ಎಂಬ ಪುಸ್ತಕದಿಂದ

ಒಬ್ಬ ಸರ್ವಾಧಿಕಾರಿಯ ಆಡಳಿತದ ಒಂದು ರಾಷ್ಟ್ರವು ಕೆಲವು ಪ್ರಗತಿಯನ್ನು ಸಾಧಿಸಬಹುದೆಂಬುದನ್ನು ಕಂಡುಕೊಂಡಿದ್ದೇವೆ.

ಸಿ. ಎಂ. ಸ್ಟೀಫನ್

ಇಂಡಿಯನ್ ಎಕ್ಸ್‌ಪ್ರೆಸ್, ನವೆಂಬರ್–3

ತರ್ತುಪರಿಸ್ಥಿತಿಯನ್ನು ಸಮರ್ಥಿಸಿಕೊಂಡಿರುವ ಇಂದಿರಾಗಾಂಧಿ, ಆಗ ಏನಾದರೂ ಅತಿರೇಕಗಳು ನಡೆದಿದ್ದಲ್ಲಿ ತಾನು ಆ ಬಗ್ಗೆ ಸಾರ್ವಜನಿಕವಾಗಿ ಕ್ಷಮಾಪಣೆ ಕೇಳಿರುವುದಾಗಿ ಹೇಳಿದರು. ಆದರೆ ತನಗೆ ಅಂತಹ ಅತಿರೇಕಗಳೇನು ಎಂಬುದು ತಿಳಿದಿಲ್ಲ ಎಂದೂ ಹೇಳಿದರು.

ದಿ. ಸ್ಟೇಟ್ಸ್‌ಮನ್, ನವೆಂಬರ್-2

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT